**ನಗರಸಭಾ ಕಾರ್ಯಾಲಯ, ಮಂಡ್ಯ.**

ಸಂಖ್ಯೆ:ನಸಮಂ/ಸಭೆ/9/2008–09. ದಿನಾಂಕ:20–7–2009.

**ಸಾಮಾನ್ಯ ಸಭೆ ನಡವಳಿಕೆಗಳು**

ದಿನಾಂಕ:20–7–2009ನೇ ಸೋಮವಾರ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಮಂಡ್ಯ ನಗರಸಭಾ ಕಾರ್ಯಾಲಯ ಶ್ರೀ ಧರಣಪ್ಪ ಸಭಾಂಗಣದಲ್ಲಿ ಮಾನ್ಯ ನಗರಸಭಾಧ್ಯಕ್ಷರವರ ಅಧ್ಯಕ್ಷತೆಯಲ್ಲಿ ನಡೆದ ನಗರಸಭೆ ಸಾಮಾನ್ಯ ಸಭೆ ನಡವಳಿಕೆಗಳು.
(ದಿನಾಂಕ:6–3–2009 ಮತ್ತು 20–5–2009ರಂದು ಮುಂದೂಡಿದ ಸಭೆ)

**ಹಾಜರಿ:** 34 **ಗೈರು ಹಾಜರಿ:** – **ಖಾಲಿ:**1 **ಒಟ್ಟು** 35

**ವಿಷಯ: 1:–** ಹಿಂದಿನ ಸಭೆ ನಡವಳಿಕೆಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.

**ತೀರ್ಮಾನ:1:–**ಹಿಂದಿನ ಸಭೆ ನಡವಳಿಕೆಗಳನ್ನು ಓದಿ ಒಪ್ಪಿ ರೆಕಾರ್ಡು ಮಾಡಲಾಯಿತು.

ನಂತರ ಸದಸ್ಯರಾದ ಶ್ರೀ.ಎಂ.ಎಲ್.ಮಂಜುನಾಥ್ ರವರು ಮಾತನಾಡುತ್ತಾ, ಜಿಲ್ಲಾಡಳಿತ ಮತ್ತು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಯವರು ನಗರದಲ್ಲಿ ಏಕ ಮುಖ ಸಂಚಾರ ವ್ಯವಸ್ಥೆ ಕಲ್ಪಿಸಿರುವುದಕ್ಕೆ ನಗರಸಭೆ ಪರವಾಗಿ ಸ್ವಾಗತ ಹಾಗೂ ನಗರಸಭೆ ಪರವಾಗಿ ಅಭಿನಂದನೆಯನ್ನು ತಿಳಿಸುತ್ತಾ, ರಸ್ತೆ ಸಂಚಾರಿ ಪೋಲೀಸ್ ಇಲಾಖೆಯಿಂದ 300 ಲೀಟರ್ ಬಿಳಿ ಬಣ್ಣ ಖರೀದಿಸಿಕೊಡಲು ಕೋರಿ ನಗರಸಭೆಗೆ ಪತ್ರ ಬರೆದಿರುವುದರಿಂದ, ನಗರಸಭೆ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದ ಕಾರಣ ನಗರಸಭೆ ವತಿಯಿಂದ 50,000/– ರೂಪಾಯಿಗಳಿಗೆ ಬಿಳಿ ಬಣ್ಣ ಖರೀದಿಸಿಕೊಡುವುದೆಂದು ಸೂಚಿಸಿದರು. ಇವರ ಸೂಚನೆಯನ್ನು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:1(ಅ):–** ಸರ್ಕಾರದಿಂದ ಬಂದಿರುವ ಸುತ್ತೋಲೆ ಮತ್ತು ಸರ್ಕಾರದ ಪತ್ರಗಳನ್ನು ಓದಿ ರೆಕಾರ್ಡು ಮಾಡುವ ವಿಚಾರ.
**ತೀರ್ಮಾನ:1(ಅ)** :–(1) **ಸರ್ಕಾರದ ಆದೇಶ ಸಂಖ್ಯೆ:ನಅಇ:37:ಎಸ್‌ಎಫ್‌ಸಿ:2008 ದಿನಾಂಕ:06–07–2009ರ –**
2009–10ನೇ ಸಾಲಿನ ಎಸ್.ಎಫ್.ಸಿ.ಅನುದಾನದ ಬಳಕೆ ಬಗ್ಗೆ ಮಾರ್ಗಸೂಚಿ.

(2) **ಸರ್ಕಾರದ ಆದೇಶ ಸಂಖ್ಯೆ: ಸಂಖ್ಯೆ:ನಅಇ:16:ಎಸ್‌ಎಫ್‌ಸಿ:2009 ದಿನಾಂಕ:06–07–2009ರ – ರೂ.887.19ಲಕ್ಷ**
ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ 2009–10ನೇ ಸಾಲಿನ ಎಸ್.ಎಫ್.ಸಿ.ಅನುದಾನದಡಿ
ಯಲ್ಲಿ ನಿಗಧಿಪಡಿಸಲಾದ ಅನುದಾನದ ಆದೇಶ.

(3) **ಸರ್ಕಾರದ ಆದೇಶ ಸಂಖ್ಯೆ: :ನಅಇ:30:ಎಸ್‌ಎಫ್‌ಸಿ:2008 ದಿನಾಂಕ:23–3–2009. – ರೂ.21,16,283–00**
ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ 2008–09ನೇ ಸಾಲಿನ ಎಸ್.ಎಫ್.ಸಿ.ಅನುದಾನ
ದಡಿಯಲ್ಲಿ ಕೊನೆಯ ಕಂತಿನ ಮುಕ್ತ ನಿಧಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

(4) **ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ:16:ಐಎಸ್‌ಟಿ:2009, ಬೆಂಗಳೂರು ದಿನಾಂಕ:24–6–2009.**
**2009–10ನೇ ಸಾಲಿಗೆ – ರೂ.15.00 ಕೋಟಿ**
**2010–11ನೇ ಸಾಲಿಗೆ – ರೂ.15.00 ಕೋಟಿ.**
ಮುಖ್ಯ ಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಕಾರ್ಯಕ್ರಮ
(Chief Minister's Small and Medium Towns Development Programme-CMSMTDP)ರ ಸಂಬಂಧ .

(5) **ಸರ್ಕಾರದ ಆದೇಶ ಸಂಖ್ಯೆ: ನಅಇ/02/ಎಸ್‌ಎಫ್‌ಸಿ/2009 ದಿನಾಂಕ:23–3–2009 – ರೂ. 7.50ಲಕ್ಷ**
2008–09ನೇ ಸಾಲಿನಲ್ಲಿ ಎಸ್.ಎಫ್.ಸಿ.ಅನುದಾನದಡಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ
ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

(6) **ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ:5:ಎಸ್‌ಎಫ್‌ಸಿ:2009 ದಿನಾಂಕ:25–3–2009. – ರೂ.10,84,000–00**
12ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆಗೊಳಿಸಿರುವ ಬಗ್ಗೆ.

(7) **ಸರ್ಕಾರದ ಆದೇಶ ಸಂಖ್ಯೆ:ನಅಇ:69:ಎಸ್‌ಎಫ್‌ಸಿ:2007 ಬೆಂಗಳೂರು ದಿನಾಂಕ:18–3–2009–ರೂ.54,00,000–00**
ರಲ್ಲಿ ಸ್ಥಳೀಯ ಸಂಸ್ಥೆಗಳಿಗೆ ರಸ್ತೆ ಮತ್ತು ಸೇತುವೆಗಳ ನಿರ್ವಹಣೆಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

(8) **ಸರ್ಕಾರದ ಆದೇಶ ಸಂಖ್ಯೆ:ನಅಇ:46:ಎಸ್‌ಎಫ್‌ಸಿ:2006 ದಿನಾಂಕ:25–3–2009. –ರೂ. 75,000–00**
12ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಸಾರ್ವಜನಿಕ ಕಟ್ಟಡಸಗಳ ನಿರ್ವಹಣೆಗಾಗಿ 2008–0ನೇ ಸಾಲಿನ 1ನೇ ಕಂತಿನ ಅನುದಾನದ ಬಿಡುಗಡೆ ಬಗ್ಗೆ.

(9) ಸರ್ಕಾರದ ಆದೇಶ ಸಂಖ್ಯೆ:ನಅಇ:46:ಟಿಎಂಡಿ:2008 ಬೆಂಗಳೂರು ದಿನಾಂಕ:23–6–2009.
ಮಂಡ್ಯ ನಗರಸಭೆಯ ಸುಭಾಷ್‌ನಗರದಲ್ಲಿ ಶಿವನಂಜಪ್ಪ ಪಾರ್ಕ್ ಮುನಿಸಿಪಲ್ ಅಸೆಸ್ಮೆಂಟ್ ನಂಬರ್:1794ರಲ್ಲಿನ ಪೂರ್ವ–ಪಶ್ಚಿಮ 340 ಅಡಿ ಉತ್ತರ ದಕ್ಷಿಣ 227 ಅಡಿ ವಿಸ್ತೀರ್ಣದ ಜಾಗವನ್ನು ಡಾ:ಬಿ.ಆರ್.ಅಂಬೇಡ್ಕರ್ ಭವನ ನಿರ್ಮಿಸಲು ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು ಡಾ:ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಸಮಿತಿ ಇವರಿಗೆ ಮುಫತ್ತಾಗಿ ನೀಡಲು ಮಂಜೂರಾತಿ ನೀಡಿರುವ ವಿಷಯವನ್ನು ಓದಿ ರೆಕಾರ್ಡು ಮಾಡಲಾಯಿತು.

**ವಿಷಯ: 2:–** 2009–2010ನೇ ಸಾಲಿನ ಅಂದಾಜು ಆಯ ವ್ಯಯ ಪತ್ರವನ್ನು ಒಪ್ಪಿ ಅನುಮೋದಿಸುವ ವಿಚಾರ.
**ತೀರ್ಮಾನ:2:–** 2009–10ನೇ ಸಾಲಿನ ಅಂದಾಜು ಆಯ ವ್ಯಯ ಪತ್ರದ ಸಂಕ್ಷಿಪ್ತ ವಿವರವನ್ನು ಮಾನ್ಯ ನಗರಸಭಾಧ್ಯಕ್ಷರ ಪರವಾಗಿ ಅಧ್ಯಕ್ಷರ ಅನುಮತಿ ಮೇರೆಗೆ ಪೌರಾಯುಕ್ತರು ಸಭೆಗೆ ಓದಿ ತಿಳಿಸಲು ಮುಂದಾದರು. ನಂತರ ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು ಪೌರಾಯುಕ್ತರಿಗೆ ಓದುವುದನ್ನು ನಿಲ್ಲಿಸಲು ತಿಳಿಸುತ್ತಾ, 26 ಜನ ನಗರಸಭಾ ಸದಸ್ಯರುಗಳು ಸ್ಥಾಯಿ ಸಮಿತಿ ರಚನೆಗಾಗಿ ಸದಸ್ಯರನ್ನು ಆಯ್ಕೆ ಮಾಡಿದ್ದೇವೆ ಹಾಗೂ ಸಹಿ ಮಾಡಿ ಮಾನ್ಯ ಅಧ್ಯಕ್ಷರಿಗೆ ಕೊಟ್ಟಿರುವುದಾಗಿ ತಿಳಿಸಿದರು. 26 ಜನ ಸಹಿ ಮಾಡಿಕೊಟ್ಟಿರುವ ಪತ್ರವನ್ನು ಸಭೆಯಲ್ಲಿ ಓದಿ ತಿಳಿಸಲಾಯಿತು ನಂತರ ರೆಕಾರ್ಡು ಮಾಡಲಾಯಿತು.

2009–10ನೇ ಸಾಲಿನ ಆಯವ್ಯಯ ಮುಂಗಡ ಪತ್ರವನ್ನು ಸ್ಥಾಯಿ ಸಮಿತಿ ಛೇರ್ಮನ್‌ರವರೇ ಓದುವಂತೆ ತಿಳಿಸಿದರು. ನಂತರ ಅಧ್ಯಕ್ಷರು ಸ್ಥಾಯಿ ಸಮಿತಿ ಛೇರ್ಮನ್‌ರವರನ್ನು ವೇದಿಕೆಗೆ ಬರಮಾಡಿಕೊಂಡು ಆಸನದಲ್ಲಿ ಕುಳ್ಳಿರಿಸಿ ನಂತರ 2009–10ನೇ ಸಾಲಿನ ನಗರಸಭೆಯ ಅಂದಾಜು ಆಯವ್ಯಯ ಪತ್ರದ ಸಂಕ್ಷಿಪ್ತ ವಿವರವನ್ನು ಸ್ಥಾಯಿ ಸಮಿತಿ ಛೇರ್ಮನ್‌ರವರಾದ ಶ್ರೀ.ಕೆ.ಎಸ್.ಕುಮಾರ್‌ರವರು ಸಭೆಗೆ ಪತ್ರವನ್ನು ಓದಿ ತಿಳಿಸಿದರು. ನಂತರ 2009–10ನೇ ಸಾಲಿನ ನಗರಸಭೆಯ ಅಂದಾಜು ಆಯವ್ಯಯ ಪತ್ರವನ್ನು ಒಪ್ಪಿ ಓದಿ ಅನುಮೋದಿಸಲಾಯಿತು.

**ನಗರಸಭೆಯ 2009–10ನೇ ಸಾಲಿನ ಆಯ–ವ್ಯಯದ ಘೋಷ್ವಾರೆ.**

ಎ) **ಆರಂಭ ಶಿಲ್ಕು –** ರೂ. 3,32,54,118–00

ಬಿ) **ರಾಜಸ್ವ ಖಾತೆ –**

(1) ರಾಜಸ್ವ ಸ್ವೀಕೃತಿಗಳು ರೂ.23,05,80,300–00

(2) ರಾಜಸ್ವ ಪಾವತಿಗಳು ರೂ.14,06,35,776–00

---

ರಾಜಸ್ವ ಖಾತೆಯಲ್ಲಿನ ಹೆಚ್ಚುವರಿ ಬಾಬ್ತು. ರೂ. 8,99,44,524–00

---

ಸಿ) **<u>ಬಂಡವಾಳ ಖಾತೆ</u>**:–

| | |
|---|---|
| (1) ಬಂಡವಾಳ ಸ್ವೀಕೃತಿಗಳು | ರೂ. 20,20,80,000–00 |
| (2) ಬಂಡವಾಳ ಪಾವತಿಗಳು | ರೂ. 31,54,40,000–00 |
| ಬಂಡವಾಳ ಖಾತೆಯಲ್ಲಿ ಕೊರತೆ | (–) ರೂ. 11,33,60,000–00 |

ಡಿ) **<u>ಅಸಾಧಾರಣ ಖಾತೆ</u>**

| | |
|---|---|
| (1)ಅಸಾಧಾರಣ ಸ್ವೀಕೃತಿಗಳು | ರೂ.27,29,39,929–00 |
| (2) ಅಸಾಧಾರಣ ಪಾವತಿಗಳು | ರೂ.24,90,31,000–00 |
| ಅಸಾಧಾರಣ ಖಾತೆಯ ಹೆಚ್ಚುವರಿ. | ರೂ.2,39,08,929–00 |

ಇ) ಒಟ್ಟು ಹೆಚ್ಚುವರಿ

| | |
|---|---|
| (ಬಿ.+ಸಿ+ಡಿ) | ರೂ. 4,93,453–00 |
| ಅಂತಿಮ ಶಿಲ್ಕು (ಎ+ಇ) | ರೂ.1,04,66,677–00 |

ದಿನಾಂಕ:20–7–2009.

ಇವರಿಗೆ,
ಮಾನ್ಯ ಅಧ್ಯಕ್ಷರು,
ನಗರಸಭೆ,
ಮಂಡ್ಯ.

ಮಾನ್ಯರೆ,

ವಿಷಯ: ಸ್ಥಾಯಿ ಸಮಿತಿ ರಚನೆ ಬಗ್ಗೆ.
ಉಲ್ಲೇಖ: ದಿನಾಂಕ:29–5–2009ರಂದು ಕರೆಯಲಾಗಿದ್ದ ಸಾಮಾನ್ಯ ಸಭೆ ವಿಷಯ ಸಂಖ್ಯೆ:6ರ ಬಗ್ಗೆ.

–

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಾನುಸಾರ ನಗರಸಭೆ ಸ್ಥಾಯಿ ಸಮಿತಿ ರಚಿಸುವ ಸಂಬಂಧ ಚರ್ಚೆಗೆ ತಂದಿರುವುದು ಸ್ವಾಗತಾರ್ಹ. ಸದರಿ ಸಮಿತಿಯನ್ನು ರಚಿಸುವ ಸಂಬಂಧವಾಗಿ ಈ ಹಿಂದಿನ ಸಭೆಯಲ್ಲಿಯೇ ಚರ್ಚಿಸಿ

ತೀರ್ಮಾನಕ್ಕೆ ಬರಲಾಗಿತ್ತು. ಅದರಂತೆ ಸದರಿ ವಿಷಯವನ್ನು ಆಧ್ಯತೆ ಮೇರೆಗೆ 1ನೇ ವಿಷಯ ಮುಗಿದ ನಂತರ ಸ್ಥಾಯಿ ಸಮಿತಿ ರಚನೆ ವಿವರದಂತೆ ಸ್ಥಾಯಿ ಸಮಿತಿ ರಚನೆಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಈ ಮೂಲಕ ಲಿಖಿತ ಮನವಿ ಸಲ್ಲಿಸಿರುತ್ತೇವೆ. ಈ ಪತ್ರಕ್ಕೆ ಮಾನ್ಯತೆ ನೀಡಿ ನಾವು ಸಲ್ಲಿಸಿರುವ ಪಟ್ಟಿಯನ್ನು ಸ್ಥಾಯಿ ಸಮಿತಿಯೆಂದು ಅಧಿಕೃತ ಘೋಷಣೆ ಮಾಡುವಂತೆ ಕೋರುತ್ತೇವೆ.

**ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿಯ ವಿವರ:**

| | | |
|---|---|---|
| 1 | ಶ್ರೀ.ಕೆ.ಎಸ್.ಕುಮಾರ್ | ಅಧ್ಯಕ್ಷರು |
| 2 | ಶ್ರೀಮತಿ:ಭಾಗ್ಯಮ್ಮ | ಸದಸ್ಯರು |
| 3 | ಶ್ರೀ.ಲೋಕೇಶ್ | ಸದಸ್ಯರು |
| 4 | ಶ್ರೀಮತಿ:ಪುಷ್ಪಲತಾ | ಸದಸ್ಯರು |
| 5 | ಶ್ರೀಮತಿ:ಭಾಗ್ಯಲಕ್ಷ್ಮಿ | ಸದಸ್ಯರು |
| 6 | ಶ್ರೀಮತಿ:ಗೀತಾ ಜಯಕುಮಾರ್ | ಸದಸ್ಯರು |
| 7 | ಶ್ರೀ.ಖುರಂ ಪಾಷ | ಸದಸ್ಯರು |
| 8 | ಶ್ರೀಮತಿ:ಕಲೈಅರಸಿ | ಸದಸ್ಯರು |
| 9 | ಶ್ರೀ.ಎಂ.ಜೆ.ಚಿಕ್ಕಣ್ಣ | ಸದಸ್ಯರು |
| 10 | ಶ್ರೀ.ಹೆಚ್.ಸಿ.ಬೋರೇಗೌಡ | ಸದಸ್ಯರು |

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು,

| ಕ್ರಮ ಸಂಖ್ಯೆ | ವಾರ್ಡ್ ಸಂಖ್ಯೆ | ನಗರಸಭಾ ಸದಸ್ಯರ ಹೆಸರು ಶ್ರೀಮತಿ:ಶ್ರೀಯುತರುಗಳಾದ | ಸಹಿ |
|---|---|---|---|
| 1 | 1 | ಜಿ.ಎಸ್.ನಾಗಮಣಿರವರು ನಗರಸಭಾಧ್ಯಕ್ಷರು | ಸಹಿ |
| 2 | 24 | ಎಸ್.ರಮೇಶ್‌ರವರು ನಗರಸಭಾ ಉಪಾಧ್ಯಕ್ಷರು | ಸಹಿ |
| 3 | 2 | ಭೈರಪ್ಪರವರು, ನಗರಸಭಾ ಸದಸ್ಯರು | ಸಹಿ |
| 4 | 3 | ಎನ್.ನಂಜುಂಡಯ್ಯರವರು –"– | ಸಹಿ |
| 5 | 13 | ಎಂ.ಎಲ್.ಮಂಜುನಾಥ್‌ರವರು –"– | ಸಹಿ |
| 6 | 5 | ಕಮಲರವರು ನಗರಸಭಾ ಸದಸ್ಯರು | ಸಹಿ |
| 7 | 6 | ಹೊನ್ನಪ್ಪರವರು –"– | ಸಹಿ |
| 8 | 7 | ಕೆ.ಎಲ್.ನಾಗೇಂದ್ರರವರು –"– | ಸಹಿ |
| 9 | 8 | ಲೋಕೇಶ್ ರವರು –"– | ಸಹಿ |
| 10 | 9 | ಭಾಗ್ಯಲಕ್ಷ್ಮಿರವರು –"– | ಸಹಿ |
| 11 | 10 | ಎಂ.ಎನ್.ಚಲುವರಾಜ್‌ರವರು –"– | ಸಹಿ |
| 12 | 11 | ಎಂ.ಪಿ.ಅರುಣ್ ಕುಮಾರ್‌ರವರು –"– | – |
| 13 *** | 12 | ಹೆಚ್.ಆರ್.ಅಫ್ರೋಜ್ ಅಹಮದ್‌ರವರು –"– | ಸಹಿ |
| 15 | 14 | ಎಸ್.ಪಿ.ಗೌರೀಶ್‌ರವರು –"– | – |
| 16 | 15 | ಎಸ್.ಪಿ.ಶ್ರೀಧರ್‌ರವರು –"– | – |
| 17 | 16 | ಕೆ.ಸಿ.ನಾಗಮ್ಮರವರು –"– | – |
| 18 | 17 | ಹೆಚ್.ಸಿ.ಬೋರೇಗೌಡರವರು –"– | ಸಹಿ |
| 19 | 18 | ಎಂ.ಜೆ.ಚಿಕ್ಕಣ್ಣ –"– | ಸಹಿ |
| 20 | 19 | ಎನ್.ಕೆ.ಶಿವಪ್ರಕಾಶ್‌ಬಾಬು –"– | ಸಹಿ |

| | | | |
|---|---|---|---|
| 21 | 20 | ಕಳಯಾರಸಿರವರು –"– | ಸಹಿ |
| 22 | 21 | ಕೆ.ಎಲ್.ಶಾರದಮ್ಮರವರು –"– | – |
| 23 | 22 | ಭಾಗ್ಯಮ್ಮರವರು–"– | ಸಹಿ |
| 24 | 23 | ಖುರಂ ಪಾಷರವರು –"– | ಸಹಿ |
| 25 | 25 | ಪುಷ್ಪಲತಾರವರು –"– | ಸಹಿ |
| 26 | 26 | ಎಸ್.ಆಯಿಷಾ ತಬಸೂಂರವರು –"– | ಸಹಿ |
| 27 | 27 | ಟಿ.ಎನ್.ಶಂಕರೇಗೌಡರವರು –"– | ಸಹಿ |
| 28 | 28 | ಕೆ.ಎಸ್.ಕುಮಾರ್‌ರವರು –"– | ಸಹಿ |
| 29 | 29 | ಮಹಾಲಿಂಗಾಚಾರಿರವರು –"– | ಸಹಿ |
| 30 | 30 | ಜಿ.ಸಿ.ನಾಗರಾಜುರವರು –"– | – |
| 31 | 31 | ಶಹಜಹಾನ್ ರವರು –"– | ಸಹಿ |
| 32 | 32 | ಆರ್.ಗೀತಾರವರು –"– | ಸಹಿ |
| 33 | 33 | ವಿ.ಎಂ.ಪದ್ಮಾವತಿರವರು –"– | – |
| 34 | 34 | ಬಿ.ಎನ್.ಸವಿತಾರವರು –"– | – |
| 35 | 35 | ಶಂಕರೇಗೌಡರವರು –"– | ಸಹಿ |

ನಂತರ ಸದಸ್ಯರುಗಳಾದ ಶೀ.ಎಸ್.ಪಿ.ಶ್ರೀಧರ್‌ರವರು, ಶ್ರೀಮತಿ.ವಿ.ಎಂ.ಪದ್ಮಾವತಿರವರು, ಶ್ರೀಮತಿ:ಬಿ.ಎನ್. ಸಮಿತಾ ರವರು, ಶ್ರೀಮತಿ:ಕೆ.ಎಲ್.ಶಾರದಮ್ಮರವರು, ಶ್ರೀ.ಎಂ.ಪಿ.ಆರುಣ್ ಕುಮಾರ್‌ರವರು, ಶ್ರೀ.ಜಿ.ಸಿ.ನಾಗರಾಜುರವರು ಮತ್ತು ಶ್ರೀಮತಿ.ಕೆ.ಸಿ.ನಾಗಮ್ಮರವರು, ಶ್ರೀ.ಎಸ್.ಪಿ.ಗೌರೀಶ್‌ರವರುಗಳು ಸ್ಥಾಯಿ ಸಮಿತಿ ರಚನೆ ಸಂಬಂಧ ವಿಷಯ ಸಂಖ್ಯೆ:6 ರಂತೆ ಅಜೆಂಡಾದಲ್ಲಿ ಚರ್ಚೆಗೆ ತರಲಾಗಿದೆ. ಅಜೆಂಡಾದಲ್ಲಿರುವಂತೆ ಕ್ರಮವಾಗಿ ವಿಷಯಗಳನ್ನು ಚರ್ಚೆಗೆ ತಂದು ಮೊದಲು 2009–10ನೇ ಸಾಲಿನ ಆಯವ್ಯಯವನ್ನು ಮಂಡಿಸಿ ಮುಂದೆ ವಿಷಯ ಸಂಖ್ಯೆ:6ರಂತೆ ಸ್ಥಾಯಿ ಸಮಿತಿ ರಚನೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲು ಒತ್ತಾಯಪಡಿಸಿದರು.

ಆದರೆ ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರು, ಶಂಕರೇಗೌಡರವರು, ಎಂ.ಎಲ್.ಮಂಜುನಾಥ್‌ರವರು ಮಾತನಾಡಿ ಅಧ್ಯಕ್ಷರಿಗೆ ಸಲ್ಲಿಸಿರುವ ಪತ್ರದಲ್ಲಿ ಸಹಿ ಮಾಡಿರುವ 26 ಜನ ಸದಸ್ಯರುಗಳ ಬಹುಮತಾಭಿಪ್ರಾಯದಂತೆ ಆಯ್ಕೆ ಮಾಡಿರುವ ಸ್ಥಾಯಿ ಸಮಿತಿ ಸದಸ್ಯರು ಮತ್ತು ಸ್ಥಾಯಿ ಸಮಿತಿ ಛೇರ್ಮನ್‌ರವರ ಹೆಸರನ್ನು ಘೋಷಿಸುವಂತೆ ಮತ್ತು ಸದರಿ 26 ಜನ ಸದಸ್ಯರುಗಳು ಕೈ ಎತ್ತುವುದರ ಮೂಲಕ ತಮ್ಮ ಬಹುಮತವನ್ನು ವ್ಯಕ್ತಪಡಿಸಿ ಸ್ಥಾಯಿ ಸಮಿತಿ ಛೇರ್ಮನ್‌ರವರನ್ನು ವೇದಿಕೆಗೆ ಕರೆದು ಸ್ಥಾಯಿ ಸಮಿತಿ ಛೇರ್ಮನ್‌ರವರ ಆಸನದಲ್ಲಿ ಕೂರಿಸಲು ನಗರಸಭಾಧ್ಯಕ್ಷರನ್ನು ಒತ್ತಾಯಪಡಿಸಿದರು ನಂತರ ನಗರಸಭಾಧ್ಯಕ್ಷರು ಶ್ರೀ.ಕೆ.ಎಸ್.ಕುಮಾರ್‌ರವರನ್ನು ಸ್ಥಾಯಿ ಸಮಿತಿ ಛೇರ್ಮನ್‌ರನ್ನಾಗಿ ಘೋಷಿಸಿ ವೇದಿಕೆಯ ಸ್ಥಾಯಿ ಸಮಿತಿ ಛೇರ್ಮನ್‌ರವರ ಆಸನದಲ್ಲಿ ಕೂರಿಸಿ ಅಭಿನಂದಿಸಿದರು. ಹಾಗೂ ಸ್ಥಾಯಿ ಸಮಿತಿ ರಚನೆಗೆ ಒಪ್ಪಿಗೆ ಇಲ್ಲದ ಸದಸ್ಯರುಗಳ ಅಬಿಪ್ರಾಯವನ್ನು ದಾಖಲಿಸಿಕೊಳ್ಳಲು ಸೂಚಿಸಿದರು.

ಸದಸ್ಯರಾದ ಶ್ರೀಮತಿ:ಕೆ.ಸಿ.ನಾಗಮ್ಮರವರು ಮಾತನಾಡುತ್ತಾ, ವಿಪ್ ಜಾರಿ ಮಾಡಲ್ಪಟ್ಟಿರುವ ನಗರಸಭೆಯ 13 ಜನ ಜೆ.ಡಿ.ಎಸ್. ಪಕ್ಷದ ನಗರಸಭಾ ಸದಸ್ಯರುಗಳ ಸಂಬಂಧ ನ್ಯಾಯಾಲಯದಲ್ಲಿ ಮೊಖದ್ದಮೆ ಇರುತ್ತದೆ. ಆದ್ದರಿಂದ ಸದರಿ ವಿಪ್ ಜಾರಿಗೊಂಡಿರುವ ಈ ಕೆಳಕಂಡ 13 ಜನ ಜೆ.ಡಿ.ಎಸ್. ಪಕ್ಷದ ನಗರಸಭಾ ಸದಸ್ಯರುಗಳಿಗೆ ಸ್ಥಾಯಿ ಸಮಿತಿ ರಚನೆಗೆ ಮತದಾನ ಮಾಡುವ ಹಕ್ಕು ಇರುವುದಿಲ್ಲ.

1) ಶ್ರೀ.ಕೆ.ಎಲ್.ನಾಗೇಂದ್ರರವರು, ನಗರಸಭಾ ಸದಸ್ಯರು
2) ಶ್ರೀಮತಿ:ಕಮಲರವರು –"–
3) ಶ್ರೀ.ಕೆ.ಎಸ್.ಕುಮಾರ್‌ರವರು –"–
4) ಶ್ರೀಮತಿ. ಆರ್. ಗೀತಾ ರವರು –"–

5) ಶ್ರೀಮತಿ: ಕೆ.ಭಾಗ್ಯಲಕ್ಷ್ಮಿ ರವರು –"–
6) ಶ್ರೀ. ಹೊನ್ನಪ್ಪ ರವರು –"–
7) ಶ್ರೀ. ಟಿ.ಎನ್.ಶಂಕರೇಗೌಡ ರವರು –"–
8) ಶ್ರೀಮತಿ: ಪುಷ್ಪಲತಾ ರವರು –"–
9) ಶ್ರೀ. ಮಹಾಲಿಂಗಾಚಾರಿ ರವರು –"–
10) ಶ್ರೀಮತಿ:ಭಾಗ್ಯಮ್ಮ ರವರು, ನಗರಸಭಾ ಸದಸ್ಯರು
11) ಶ್ರೀಮತಿ: ಕಲ್ಯೆಯರಸಿ ರವರು –"–
12) ಶ್ರೀ.ಬೈರಪ್ಪ ರವರು –"–
13) ಎನ್.ಕೆ.ಶಿವಪ್ರಕಾಶ್ ಬಾಬುರವರು –"–

ಮತ್ತು ಸಭೆಯಲ್ಲಿ ಹಾಜರಿರುವ ಈ ಕೆಳಕಂಡ ಜೆ.ಡಿ.ಎಸ್.ಪಕ್ಷದ ನಗರಸಭಾ ಸದಸ್ಯರುಗಳಿಗೆ 26 ಜನ ಸೇರಿ ರಚಿಸಿ ಕೊಂಡಿರುವ ಸ್ಥಾಯಿ ಸಮಿತಿ ಸದಸ್ಯರು ಮತ್ತು ಅಧ್ಯಕ್ಷರ ಆಯ್ಕೆಗೆ ಸಮ್ಮತಿ ಇರುವುದಿಲ್ಲ,

1) ಶ್ರೀಮತಿ: ಕೆ.ಸಿ.ನಾಗಮ್ಮ ರವರು , ನಗರಸಭಾ ಸದಸ್ಯರು
2) ಶ್ರೀ.ಎಂ.ಪಿ.ಅರುಣಕುಮಾರ್ ರವರು , –"–
3) ಶ್ರೀ.ಎಸ್.ಪಿ.ಗೌರೀಶ್ ರವರು –"–
4) ಶ್ರೀ.ಎಸ್.ಪಿ.ಶ್ರೀಧರ ರವರು –"–
5) ಶ್ರೀ.ಜಿ.ಸಿ.ನಾಗರಾಜು ರವರು –"–
6) ಶ್ರೀಮತಿ:ಬಿ.ಎನ್.ಸವಿತ ರವರು –"–
7) ಶ್ರೀಮತಿ: ವಿ.ಎನ್.ಪದ್ಮಾವತಿ ರವರು –"–
8) ಶ್ರೀಮತಿ: ಕೆ.ಎಲ್.ಶಾರದಮ್ಮ ರವರು –"–

ಸ್ಥಾಯಿ ಸಮಿತಿ ಸದಸ್ಯರಾಗಲು ಜೆ.ಡಿ.ಎಸ್. ಪಕ್ಷದ ಸದಸ್ಯರುಗಳು ಆಕಾಂಕ್ಷಿಗಳಾಗಿದ್ದು, ಸಭೆಯಲ್ಲಿ ಹಾಜರಿದ್ದ ಜೆ.ಡಿ.ಎಸ್.ಪಕ್ಷದ ನಗರಸಭಾ ಸದಸ್ಯರುಗಳನ್ನು ಗಣನೆಗೆ ತೆಗೆದುಕೊಳ್ಳದೇ ಸ್ಥಾಯಿ ಸಮಿತಿ ರಚನೆ ಕುರಿತು ಇವರುಗಳ ಅಭಿಪ್ರಾಯವನ್ನು ಪಡೆಯದೇ, ನ್ಯಾಯಾಲಯದಲ್ಲಿ ಮೊಖದ್ದಮ್ಮೆ ಇದ್ದರೂ ಕೂಡ, ನಗರಸಭೆಯ ಕಾನೂನು ಸಲಹೆಗಾರರಾದ ಶ್ರೀ.ಎಂ.ಬಿ.ರಾಜಶೇಖರ್‌ರವರು ನೀಡಿರುವ ಕಾನೂನು ಸಲಹೆಯನ್ನು ಆಧಾರವಾಗಿಟ್ಟುಕೊಂಡು 26 ಜನ ಸಹಿ ಮಾಡಿಕೊಟ್ಟಿರುವ ಪತ್ರಕ್ಕೆ ಮಾನ್ಯತೆ ನೀಡಿ ನಗರಸಭಾಧ್ಯಕ್ಷರು 26 ಜನ ಸದಸ್ಯರುಗಳ ಒತ್ತಾಯದ ಮೇರೆಗೆ ಸ್ಥಾಯಿ ಸಮಿತಿ ಸದಸ್ಯರು ಮತ್ತು ಅಧ್ಯಕ್ಷರನ್ನು ಆಯ್ಕೆ ಮಾಡಿರುತ್ತಾರೆ. ಇದಕ್ಕೆ ಅವಕಾಶ ಮಾಡಿಕೊಟ್ಟ ನಗರಸಭಾಧ್ಯಕ್ಷರು ಮತ್ತು ಪೌರಾಯುಕ್ತರು ನೇರ ಹೊಣೆಯಾಗಿರುತ್ತಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಮಧ್ಯೆ ಶ್ರೀ.ಎನ್.ನಂಜುಂಡಯ್ಯರವರು ಬೇಸರವನ್ನು ವ್ಯಕ್ತಪಡಿಸುತ್ತಾ ಸದಸ್ಯರುಗಳ ನಡುವೆ ವಾಗ್ವಾದಗಳು ನಡೆದು ಶ್ರೀ.ಎನ್.ನಂಜುಂಡಯ್ಯರವರು ಸಭೆಯಿಂದ ಹೊರನಡೆದರು.

ನಂತರ ಸ್ಥಾಯಿ ಸಮಿತಿ ಛೇರ್ಮನ್‌ರಾಗಿ ಆಯ್ಕೆಗೊಂಡ ಶ್ರೀ.ಕೆ.ಎಸ್.ಕುಮಾರ್‌ರವರು ಮಂಡ್ಯ ನಗರಸಭೆಯ 2009–10ನೇ ಸಾಲಿನ ಅಂದಾಜು ಆಯವ್ಯಯ ಪತ್ರದ ಸಂಕ್ಷಿಪ್ತ ವಿವರವನ್ನು ಸಭೆಯಲ್ಲಿ ಓದಿ ತಿಳಿಸಿದರು. ಅಂತಿಮವಾಗಿ 2009–10ನೇ ಸಾಲಿನ ಮಂಡ್ಯ ನಗರಸಭೆಯ ಅಂದಾಜು ಆಯವ್ಯಯ ಪತ್ರವನ್ನು ಸಭೆಯು ಒಪ್ಪಿ ಅನುಮೋದಿಸಲಾಯಿತು.

**<u>ವಿಷಯ:3:–</u>** ಟೆಂಡರ್ ಪ್ರಕಟಣೆ ಸಂಖ್ಯೆ:ನಸಮಂ/ಕಾವಿ/ಟಿಎಫ್‌ಸಿ/ಸಿಆರ್/52/2008–09 ದಿನಾಂಕ:2–1–2009 ಮತ್ತು ಕಾವಿ:ಎಸ್.ಎಫ್.ಸಿ.:ಸಿಆರ್:72/2008–09 ದಿನಾಂಕ:21–2–2009ರಂತೆ ಟೆಂಡರ್ ಕರೆದಿದ್ದು ಬಂದಿರುವ ಟೆಂಡರ್‌ಗಳ ತುಲನಾತ್ಮಕ ಪಟ್ಟಿಯನ್ನು ಅನುಮೋದಿಸುವ ವಿಚಾರ.

**<u>ತೀರ್ಮಾನ:3:–</u>** ಟೆಂಡರ್‌ಗಳ ತುಲನಾತ್ಮಕ ಪಟ್ಟಿಯನ್ನು ಕೆ.ಡಬ್ಲ್ಯೂ.1ರ ಟೆಂಡರ್ ನಿಯಮದ ಪ್ರಕಾರ ಪರಿಶೀಲಿಸಿ ಒಪ್ಪಿ ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯ:4:–** ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿನ ಬಡಾವಣೆಗಳಲ್ಲಿ ನಾಗರೀಕರಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಪ್ರತಿ ವರ್ಷ ಎಸ್.ಆರ್.ದರ ಹೆಚ್ಚಾಗುತ್ತಿದ್ದು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ದುಬಾರಿ ವೆಚ್ಚವಾಗುತ್ತಿರುವುದರಿಂದ ಅಭಿವೃದ್ಧಿ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:4:–** ಹಾಲಿ ಇರುವ ಅಭಿವೃದ್ಧಿ ಶುಲ್ಕ ಚದರಮೀಟರ್ ಒಂದಕ್ಕೆ ರೂ.120–00ಗಳ ದರದಲ್ಲಿಯೇ ಪಾವತಿಸಿಕೊಳ್ಳುವುದೆಂದು ಸದಸ್ಯರಾದ ಶ್ರೀ.ಎಂ.ಜೆ.ಚಿಕ್ಕಣ್ಣರವರು ಸೂಚಿಸಿದರು. ಇವರ ಸೂಚನೆಯನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:5:–** ವಾರ್ಡ್ ನಂಬರ್:17ರ ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿ ಮೊದಲನೇ ಹಂತದಲ್ಲಿರುವ ಪಂಪ್ ಹೌಸ್ ಆವರಣದಲ್ಲಿ ಅಂಗನವಾಡಿ ಕಟ್ಟಡ ನಿರ್ಮಿಸಲು 40'X30'ಅಡಿ ನಿವೇಶನವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ವಹಿಸಿಕೊಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:5:–** ಸದಸ್ಯರಾದ ಶ್ರೀ.ಹೆಚ್.ಸಿ.ಬೋರೇಗೌಡರವರು ಅಂಗನವಾಡಿ ಕಟ್ಟಡ ನಿರ್ಮಿಸಲು 40'X30'ಅಡಿ ನಿವೇಶನವನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ನಿವೇಶನ ವಹಿಸಿಕೊಡುವುದು ಎಂಬುದರ ಬದಲು 17ನೇ ವಾರ್ಡ್‌ನಲ್ಲಿ ಶೇ.80%ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿವಾಸಿಗಳು ಇರುವುದರಿಂದ ಸದರಿ 30'*40ಅಡಿ ನಗರಸಭೆ ನಿವೇಶನದಲ್ಲಿ ಶೇಕಡ 18ರ ಯೋಜನೆಯಡಿ ಅಂಗನವಾಡಿ ಕಟ್ಟಡವನ್ನು ನಿರ್ಮಿಸಿಕೊಡುವಂತೆ ವಿಷಯವನ್ನು ತಿದ್ದುಪಡಿಮಾಡಿಕೊಂಡು ಚರ್ಚೆಗೆ ತೆಗೆದುಕೊಳ್ಳಲು ಕೋರಿದರು. ನಂತರ ಸಭೆಯು ಚರ್ಚಿಸಿ ವಾರ್ಡ್ ನಂಬರ್:17ರ ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿ ಮೊದಲನೇ ಹಂತದಲ್ಲಿರುವ ಪಂಪ್ ಹೌಸ್ ಆವರಣದಲ್ಲಿ ಅಂಗನವಾಡಿ ಕಟ್ಟಡ ನಿರ್ಮಿಸಲು 40'X30'ಅಡಿ ನಿವೇಶನದಲ್ಲಿ ಮುಂದೆ ಎಸ್.ಎಫ್.ಸಿ.ಅನುದಾನದಡಿ ಬಿಡುಗಡೆಯಾಗುವ ಶೇಕಡ 18 ರ ಹಣದಲ್ಲಿ ಅಂಗನವಾಡಿ ಕಟ್ಟಡವನ್ನು ನಿರ್ಮಿಸಲು ಸಭೆಯು ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:6:–** ಸ್ಥಾಯಿ ಸಮಿತಿ ರಚಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ. (ಹಿಂದಿನ ಸಭೆ ದಿನಾಂಕ 25–8–2008ರ ವಿಷಯ 8ರಂತೆ ಮುಂದೂಡಲಾದ ವಿಷಯ).

**ತೀರ್ಮಾನ:6:–** ವಿಷಯ ಸಂಖ್ಯೆ:2ರಲ್ಲಿರುವ ತೀರ್ಮಾನದಂತೆ 26ಜನ ಮಾನ್ಯ ನಗರಸಭಾ ಸದಸ್ಯರುಗಳು ಲಿಖಿತದ ಮೂಲಕ ಸಹಿ ಮಾಡಿಕೊಟ್ಟಿರುವ ಪತ್ರದಲ್ಲಿ ಆಯ್ಕೆ ಮಾಡಿಕೊಂಡಿರುವ ಈ ಕೆಳಕಂಡ 10 ಮಂದಿ ಸದಸ್ಯರನ್ನೊಳಗೊಂಡಂತೆ ಸ್ಥಾಯಿ ಸಮಿತಿ ಸದಸ್ಯರು ಮತ್ತು ಅಧ್ಯಕ್ಷರನ್ನು ಆಯ್ಕೆ ಮಾಡಿ ಸ್ಥಾಯಿ ಸಮಿತಿಯನ್ನು ರಚಿಸಲು ಕೋರಿರುವ ಮೇರೆಗೆ ಬಹುಮತಾಭಿಪ್ರಾಯದಂತೆ ಒಪ್ಪಿ ಸ್ಥಾಯಿ ಸಮಿತಿಯನ್ನು ರಚಿಸಲಾಯಿತು.

**ಅಧ್ಯಕ್ಷರು ಮತ್ತು ಸದಸ್ಯರ ಪಟ್ಟಿಯ ವಿವರ:**

| | | |
|---|---|---|
| 1 | ಶ್ರೀ.ಕೆ.ಎಸ್.ಕುಮಾರ್ | ಅಧ್ಯಕ್ಷರು |
| 2 | ಶ್ರೀಮತಿ:ಭಾಗ್ಯಮ್ಮ | ಸದಸ್ಯರು |
| 3 | ಶ್ರೀ.ಲೋಕೇಶ್ | ಸದಸ್ಯರು |
| 4 | ಶ್ರೀಮತಿ:ಪುಷ್ಪಲತಾ | ಸದಸ್ಯರು |
| 5 | ಶ್ರೀಮತಿ:ಭಾಗ್ಯಲಕ್ಷ್ಮಿ | ಸದಸ್ಯರು |
| 6 | ಶ್ರೀಮತಿ:ಆರ್ ಗೀತಾ ಜಯಕುಮಾರ್ | ಸದಸ್ಯರು |
| 7 | ಶ್ರೀ.ಖುರಂ ಪಾಷ | ಸದಸ್ಯರು |
| 8 | ಶ್ರೀಮತಿ:ಕಲ್ಪೈಅರಸಿ | ಸದಸ್ಯರು |
| 9 | ಶ್ರೀ.ಎಂ.ಜೆ.ಚಿಕ್ಕಣ್ಣ | ಸದಸ್ಯರು |
| 10 | ಶ್ರೀ.ಹೆಚ್.ಸಿ.ಬೋರೇಗೌಡ | ಸದಸ್ಯರು |

**ವಿಷಯ:7:–** 2009ನೇ ಜನವರಿ, ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ಮಾಹೆಗಳ ಜಮೆ ಖರ್ಚುಗಳನ್ನು ಓದಿ ರೆಕಾರ್ಡ್ ಮಾಡುವ ವಿಚಾರ.

**ತೀರ್ಮಾನ:7:–** ಓದಿ ಒಪ್ಪಿ ರೆಕಾರ್ಡ್ ಮಾಡಲಾಯಿತು.

**ವಿಷಯ:8:– ಅಧ್ಯಕ್ಷರ ಅಪ್ಪಣೆ ಮೇರೆಗೆ ತರಬಹುದಾದ ಇತರೆ ವಿಷಯಗಳು.**

**ವಿಷಯ:8(1):–** ಮಾನ್ಯ ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರಿಂದ ಬಂದಿರುವ ವಿಷಯ.

ವಾರ್ಡ್ ನಂಬರ್:7ರ ವಿ.ವಿ.ನಗರ ಕಲ್ಲಹಳ್ಳಿಯ ಬೆಲ್ಲದ ಮಾರ್ಕೆಟ್ ಮುಂಭಾಗದ 6ನೇ ಕ್ರಾಸ್‌ನಲ್ಲಿ ಕೊಳಚೆ ನೀರು ವಾಸದ ಮನೆಗಳಿಗೆ ಬರುತ್ತಿರುವುದರಿಂದ ಸದರಿ ರಸ್ತೆಯಲ್ಲಿ ಶ್ರೀ.ಬೋರೇಗೌಡರ ಮನೆಯಿಂದ ರಾಜುರವರ ಮನೆವರೆಗೆ ಬಾಕ್ಸ್ ಚರಂಡಿ ಮಾಡಿಸುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(1):–** ದಿನಾಂಕ:31–1–2009ರ ಸಾಮಾನ್ಯ ಸಭೆಯಲ್ಲಿ ಪ್ರಭಾರ ನಗರಸಭಾಧ್ಯಕ್ಷರು ಘೋಷಿಸಿರುವ ಎಸ್.ಎಫ್.ಸಿ. ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಾಗಿ ಪ್ರತೀ ವಾರ್ಡ್‌ಗೆ ತಲಾ 10.00ಲಕ್ಷ ರೂಪಾಯಿಗಳಲ್ಲಿ ಮಾಡಿ ಸುವುದೆಂದು ತೀರ್ಮಾನಿಸಲಾಯಿತು.

**ವಿಷಯ:8(2):–** ಮಾನ್ಯ ಸದಸ್ಯರಾದ ಶ್ರೀಮತಿ:ಬಿ.ಎನ್.ಸವಿತಾ ರವರಿಂದ ಬಂದಿರುವ ವಿಷಯ.

ವಾರ್ಡ್ ನಂಬರ್:34 ಚಿಕ್ಕೇಗೌಡನದೊಡ್ಡಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯಲ್ಲಿ ಎರಡು ಕೊಠಡಿಗಳಲ್ಲಿ ಮಾತ್ರ ಶಾಲೆ ನಡೆಸುತ್ತಿದ್ದು, ಶಾಲಾ ಅಭಿವೃದ್ಧಿ ಸಮಿತಿಯವರು ಮತ್ತು ಸ್ಥಳೀಯ ಸಾರ್ವಜನಿಕರು ಮಾರಮ್ಮ ದೇವಸ್ಥಾನದ ಪಕ್ಕ ಗ್ರಾಮ ಠಾಣದ ಖಾಲಿ ನಿವೇಶನ ಅಳತೆ $127' \times \frac{76'+20'}{2}$ಅಡಿಗಳ ನಿವೇಶನವಿದ್ದು ಸದರಿ ನಿವೇಶನವನ್ನು ನಗರಸಭೆಗೆ ದಾಖಲೆ ತೆಗೆದುಕೊಂಡು ಸದರಿ ನಿವೇಶನವನ್ನು ಶಾಲಾ ಅಭಿವೃದ್ಧಿ ಸಮಿತಿಗೆ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ವಹಿಸಿಕೊಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(2):–** ವಾರ್ಡ್ ಸದಸ್ಯರಿಂದ ಪೂರ್ಣ ಮಾಹಿತಿ ಪಡೆದು ವಿಷಯವನ್ನು ಸ್ಥಾಯಿ ಸಮಿತಿ ಸಭೆಗೆ ತರುವುದೆಂದು ತೀರ್ಮಾನಿಸಲಾಯಿತು.

**ವಿಷಯ:8(3):–** ಶ್ರೀಮತಿ:ಕೆ.ಸಿ.ನಾಗಮ್ಮರವರು ಮನವಿ ಸಲ್ಲಿಸಿ ಹೊಸಹಳ್ಳಿ ಬೇವಿನಕಟ್ಟೆ ಹತ್ತಿರ ಅಂಗನವಾಡಿ ಕಟ್ಟಡಕ್ಕೆ 30'X40'ಅಡಿ ನಿವೇಶನವನ್ನು ಅಂಗನವಾಡಿ ಕಟ್ಟಡ ನಿರ್ಮಾಣಕ್ಕಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ವಹಿಸಿಕೊಡುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(3):–** ವಿಷಯವನ್ನು ಸ್ಥಾಯಿ ಸಮಿತಿ ಸಭೆಗೆ ತರುವುದೆಂದು ತೀರ್ಮಾನಿಸಲಾಯಿತು.

**ವಿಷಯ:8(4):–** ಮಾನ್ಯ ಸದಸ್ಯರಾದ ಶ್ರೀ.ಟಿ.ಎನ್.ಶಂಕರೇಗೌಡರವರಿಂದ ಬಂದಿರುವ ವಿಷಯ.

ವಾರ್ಡ್ ನಂಬರ್:27, ವಿಶ್ವೇಶ್ವರಯ್ಯ ಲೇಔಟ್ ಪಾರ್ಕ್ ರಸ್ತೆಯ ಮುಂಭಾಗದಲ್ಲಿ ಡೆಕ್ ಸ್ಲ್ಯಾಬ್ ದುರಸ್ತಿ , ಯತ್ತಗದ ಹಳ್ಳಿ ರಸ್ತೆಗೆ ಹೊಂದಿಕೊಂಡಂತೆ ಮುನಿಯಪ್ಪರವರ ಮನೆ ಮುಂಭಾಗದ ಚರಂಡಿ ದುರಸ್ತಿ , ತಾವರೆಗೆರೆ ಒಂದನೇ ಅಡ್ಡ ರಸ್ತೆಯ ಬೆತೆಸ್ಥಾ ಚರ್ಚ್ ಮುಂಭಾಗದಲ್ಲಿ ದುರಸ್ತಿ, ಹಾಗೂ ಟಿಂಕರ್ ಬಾಷಾ ರವರ ಮನೆಯಿಂದ ಏಜು ಸಾಹೇಬ್ ಮನೆವರೆಗೆ ಡೆಕ್ ಸ್ಲಾಬ್ ಮತ್ತು ಕಾಂಕ್ರೀಟ್ ಚರಂಡಿ ನಿರ್ಮಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(4):–** ಈಗಾಗಲೇ ಅಧ್ಯಕ್ಷರು ಮತ್ತು ಸಹಾಯಕ ಕಾರ್ಯಪಾಲಕ ಅಬಿಯಂತರರು ಸ್ಥಳ ಪರಿಶೀಲಿಸಲಾಗಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಕಾಮಗಾರಿಯನ್ನು ಅತ್ಯವಶ್ಯಕವಾಗಿ ತುರ್ತಾಗಿ ಮಾಡಿಸಬೇಕಾಗಿರುವುದರಿಂದ ಸದರಿ ಕಾಮಗಾರಿ ಅಂದಾಜು ವೆಚ್ಚ ರೂ.65,000–00ಗಳ ಕಾಮಗಾರಿಯನ್ನು ಮಾಡಿಸಲು ಸಭೆಯಲ್ಲಿ ಒಪ್ಪಲಾಯಿತು.

**ವಿಷಯ:8(5):–** ಮಾನ್ಯ ಸದಸ್ಯರಾದ ಶ್ರೀಮತಿ:ಕಲ್ಯೆಯರಸಿ ರವರಿಂದ ಬಂದಿರುವ ವಿಷಯ.

ವಾರ್ಡ್ ನಂಬರ್:20ರಲ್ಲಿ ಬದಲಿ ಕಾಮಗಾರಿ ಮಾಡಿಸಲು ಶಿವನಂಜಪ್ಪ ಲೇಔಟ್ 1 ಮತ್ತು 2ನೇ ಕ್ರಾಸ್‌ನಲ್ಲಿ ಡಾಂಬರೀಕರಣ ಕಾಮಗಾರಿ ಅಂದಾಜು ರೂ.8.00ಲಕ್ಷಗಳ ವೆಚ್ಚದ ಕಾಮಗಾರಿಯನ್ನು ನಿರ್ವಹಿಸಲು ಮಂಜೂರಾಗಿದ್ದು ಸದರಿ ಕಾಮಗಾರಿಯು ಈಗಾಗಲೇ ಹಿಂದಿನ ವರ್ಷದಲ್ಲಿ ಸೇರ್ಪಡೆ ಮಾಡಿ ಸದರಿ ಕಾಮಗಾರಿ ಕೆಲಸವು ಪೂರ್ಣಗೊಂಡಿರುವುದರಿಂದ ಸದರಿ ಕಾಮಗಾರಿ ಬದಲಿಗೆ ಹರಿಶ್ಚಂದ್ರ ಸರ್ಕಲ್ 1 ಮತ್ತು 2ನೇ ಕ್ರಾಸ್ ರಸ್ತೆಗಳಿಗೆ ಡಾಂಬರೀಕರಣ ಮಾಡಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(5):–** ಬದಲಿ ಕಾಮಗಾರಿ ಮಾಡಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:8(6):–** ಮಾನ್ಯ ಸದಸ್ಯರಾದ ಶ್ರೀಮತಿ:ಭಾಗ್ಯಮ್ಮರವರಿಂದ ಬಂದಿರುವ ವಿಷಯ:

ವಾರ್ಡ್ ನಂಬರ್:22ರಲ್ಲಿ ದೊಡ್ಡ ಮೋರಿಯಲ್ಲಿ ಹೂಳು ತುಂಬಿಕೊಂಡಿರುವುದರಿಂದ ಮೋರಿಯಲ್ಲಿ ನೀರು ಸರಾಗವಾಗಿ ಹರಿದು ಹೋಗದೇ ದುರ್ವಾಸನೆಯಿಂದ ಕೂಡಿದ್ದು ಸದರಿ ಪ್ರದೇಶದ ನಿವಾಸಿಗಳಿಗೆ ತೊಂದರೆಯಾಗುತ್ತಿರುವುದರಿಂದ ಸದರಿ ದೊಡ್ಡ ಮೋರಿಯಲ್ಲಿ ತುಂಬಿರುವ ಹೂಳನ್ನು ತೆಗೆಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(6):–** ಅಧ್ಯಕ್ಷರು , ಪೌರಾಯುಕ್ತರು ಮತ್ತು ಸಹಾಯಕ ಅಭಿಯಂತರರು ಸ್ಥಳ ಪರಿಶೀಲನೆ ಮಾಡಿ ತುರ್ತಾಗಿ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.

**ವಿಷಯ:8(7):–** ಮಾನ್ಯ ಸದಸ್ಯರಾದ ಶ್ರೀ.ಎನ್.ಕೆ.ಶಿವಪ್ರಕಾಶ್‌ಬಾಬುರವರಿಂದ ಬಂದಿರುವ ವಿಷಯ.
ಮಂಡ್ಯ ನಗರದ ವಾರ್ಡ್ ನಂಬರ್: 19ರಲ್ಲಿ ಹಿಂದೆ 12ನೇ ಹಣಕಾಸು ಯೋಜನೆಯಡಿಯಲ್ಲಿ ನೂರಡಿ ರಸ್ತೆಯಿಂದ ಹೊಸಹಳ್ಳಿ ರಸ್ತೆ ಸೇರುವ ರಸ್ತೆಗೆ ರಿವಿಟ್‌ಮೆಂಟ್ , ಮೆಟಲಿಂಗ್ ಹಾಗೂ ಡಾಂಬರೀಕರಣ ಮಾಡುವ ಕಾಮಗಾರಿ ಮಂಜೂರಾಗಿದ್ದು ಸದರಿ ಕಾಮಗಾರಿ ಅವಶ್ಯಕತೆ ಇಲ್ಲದ ಕಾರಣ ಈ ಕಾಮಗಾರಿಗೆ ಬದಲಾಗಿ ತುರ್ತು ಅತ್ಯವಶ್ಯಕವಾಗಿರುವ ನೆಹರುನಗರ 6 ಮತ್ತು 7ನೇ ಅಡ್ಡ ರಸ್ತೆ ಹಾಗೂ ಸುರಕ್ಷಾ ನರ್ಸಿಂಗ್ ಹೋಂ ಹಿಂಭಾಗದ ರಸ್ತೆಗೆ ಮೆಟಲಿಂಗ್ ಮಾಡಿಸುವ ಬಗ್ಗೆ ಒಪ್ಪಿ ಅನುಮೋದಿಸುವ ವಿಚಾರ.
**ತೀರ್ಮಾನ:8(7):–** ಬದಲಿ ಕಾಮಗಾರಿ ಮಾಡಿಸಲು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:8(8):–** ಕಾಮಗಾರಿ ಕೆಲಸಗಳಿಗೆ ಗುತ್ತಿಗೆದಾರರು ಟೆಂಡರ್ ಹಾಕಲು ಟೆಂಡರ್ ಬುಕ್ ಲೆಟ್ ಮುಗಿದು ಹೋಗಿದ್ದು, ದಾಸ್ತಾನು ಇಲ್ಲದಿರುವುದರಿಂದ ತುರ್ತಾಗಿ ಕೊಟೇಷನ್ ಕರೆದಿದ್ದು ಬಂದಿರುವ ಕೊಟೇಷನ್ ದರಗಳ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಿ ಕಡಿಮೆ ದರದ ಕೊಟೇಷನ್‌ನ್ನು ಒಪ್ಪಿ ಅನುಮೋದಿಸುವ ವಿಚಾರ.
**ತೀರ್ಮಾನ:8(8):–** ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.

**ವಿಷಯ:8(9)** ದಿನಾಂಕ:4–3–2009ರಂದು 28 ಜನ ಮಾನ್ಯ ನಗರಸಭಾ ಸದಸ್ಯರು, ಮಂಡ್ಯ ನಗರ ವ್ಯಾಪ್ತಿಯ ಘನತ್ಯಾಜ್ಯ ವಸ್ತುಗಳ ನಿರ್ವಹಣೆ ಮಾಡುವ ಅಂದಾಜು ಮೊಬಲಗು ಪ್ಯಾಕೇಜ–1ರ ಅಂದಾಜು ಮೊತ್ತ ರೂ.52,89,881–00, ಪ್ಯಾಕೇಜ್–2ರ ಅಂದಾಜು ಮೊತ್ತ ರೂ.50,17,086–00 ರಂತೆ ಟೆಂಡರ್ ಕರೆಯಲು ಹಾಗೂ ಜಿಲ್ಲಾಧಿಕಾರಿಗಳ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲು ಹಾಗೂ ಟೆಂಡರ್ ಮಂಜೂತಿಗಾಗಿ ಮುಂದಿನ ಗುತ್ತಿಗೆದಾರರು ನೇಮಕವಾಗುವವರೆಗೆ ಹಾಗೂ ಇರುವ ಗುತ್ತಿಗೆದಾರರನ್ನು ಈ ಹಿಂದಿನ ದರದಲ್ಲಿಯೇ ಮುಂದುವರಿಸಲು ಒಪ್ಪಿ ಅಭಿಪ್ರಾಯ ನೀಡಿರುವುದರಿಂದ ಸ್ಥಿರೀಕರಿಸುವ ವಿಚಾರ.
**ತೀರ್ಮಾನ:8(9):–** ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

**ವಿಷಯ:8(10):–** ದಿನಾಂಕ:4–3–2009ರಂದು 28 ಜನ ಮಾನ್ಯ ನಗರಸಭಾ ಸದಸ್ಯರು, ಮಂಡ್ಯ ನಗರ ವ್ಯಾಪ್ತಿಯ ಬೀದಿ ದೀಪಗಳ ನಿರ್ವಹಣೆ ಮಾಡುವ ಅಂದಾಜು ಮೊಬಲಗು ರೂ.55ಲಕ್ಷಗಳಿಗೆ ಟೆಂಡರ್ ಕರೆಯಲು ಮಾನ್ಯ ಜಿಲ್ಲಾಧಿಕಾರಿಗಳ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲು ಹಾಗೂ ಟೆಂಡರ್ ಮಂಜೂರಾತಿಗಾಗಿ ಮುಂದಿನ ಗುತ್ತಿಗೆದಾರರು ನೇಮಕವಾಗುವವರೆಗೆ ಹಾಲಿ ಇರುವ ಗುತ್ತಿಗೆದಾರರು ಈ ಹಿಂದಿನ ದರದಲ್ಲಿಯೇ ಮುಂದುವರಿಸಲು ಒಪ್ಪಿ ಅಭಿಪ್ರಾಯ ನೀಡಿರುವುದರಿಂದ ಸ್ಥಿರೀಕರಿಸುವ ವಿಚಾರ.
**ತೀರ್ಮಾನ:8(10):–** ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

**ವಿಷಯ:8(11):–** ದಿನಾಂಕ:15–4–2009ರಂದು 22ಜನ ಮಾನ್ಯ ನಗರಸಭಾ ಸದಸ್ಯರುಗಳು ಮಂಡ್ಯ ನಗರಸಭೆಯಲ್ಲಿ ಹಾಲಿ ಇರುವ ವೈರ್ ಲೆಸ್ ಸಿಸ್ಟಂ ಜೊತೆ ಹೆಚ್ಚುವರಿ 10 ವಾಕಿ ಟಾಕಿಗಳನ್ನು ಖರೀದಿಸಲು ಹಾಗೂ ನಗರಸಭೆಯ ವೈರ್ ಲೆಸ್ ಸಿಸ್ಟಂ ಅನ್ನು ಜಿಲ್ಲಾಧಿಕಾರಿಗಳ ವೈರ್ ಲೆಸ್ ಸಿಸ್ಟಂ ಜೊತೆ ಇಂಟರ್ ಲಿಂಕ್ ಮಾಡಲು ರಿಪೀಟರ್ ಸ್ಟೇಷನ್ ಖರೀದಿಸಿ ಅಳವಡಿಸಲು ತುರ್ತಾಗಿ ಟೆಂಡರ್ ಕರೆಯಲು ಮಾನ್ಯ ಸದಸ್ಯರು ಒಪ್ಪಿಗೆ ಕೊಟ್ಟಿರುವುದನ್ನು ಸ್ಥಿರೀಕರಿಸುವ ವಿಚಾರ.
**ತೀರ್ಮಾನ:8(11):–** ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

**ವಿಷಯ:8(12):–** ಮಾನ್ಯ ಸದಸ್ಯರಾದ ಶ್ರೀ.ಹೆಚ್.ಸಿ.ಬೋರೇಗೌಡರವರಿಂದ ಬಂದಿರುವ ವಿಷಯ.
ದಿನಾಂಕ:8–5–2006ರಂದು ವಿಶೇಷ ಸಭೆ ವಿಷಯ 2ರಂತೆ ನಗರಸಭೆ ವಿವಿಧ ವಾರ್ಡ್‌ಗಳಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ತಲಾ ರೂ.1.50ಲಕ್ಷ ಮತ್ತು 0.50ಲಕ್ಷಗಳ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು,

(1) ವಾರ್ಡ್ ನಂ.17, ಹೊಸಹಳ್ಳಿ 4ನೇ ಮತ್ತು 6ನೇ ಕ್ರಾಸ್ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿಗಾಗಿ ರೂ.1.50ಲಕ್ಷ

(2) ವಾರ್ಡ್ ನಂ.17, ಶನೀಶ್ವರ ದೇವಸ್ಥಾನದ ಮುಖ್ಯ ರಸ್ತೆ ಮತ್ತು ಅಡ್ಡ ರಸ್ತೆಗಳ ಕಾಮಗಾರಿಗಾಗಿ ರೂ.1.50ಲಕ್ಷ

(3) ವಾರ್ಡ್ ನಂ.17, ಹೊಸಹಳ್ಳಿ ಬಡಾವಣೆಯ ಉದಯರವರ ಮನೆಯಿಂದ ಎನ್.ರಾಜು ಮನೆಯವರೆಗೆ ಡಾಂಬರೀಕರಣ ಕಾಮಗಾರಿಗಾಗಿ ರೂ.0.50ಲಕ್ಷ

(4) ವಾರ್ಡ್ ನಂ.17, ಶನೇಶ್ವರ ದೇವಸ್ಥಾನದ ಮುಂಭಾಗದ ರಸ್ತೆ ಡಾಂಬರೀಕರಣ ಕಾಮಗಾರಿಗಾಗಿ. ರೂ.0.50ಲಕ್ಷ

ಈ ಮೇಲ್ಕಂಡ ಕಾಮಗಾರಿಗಳಿಗೆ ಈಗಾಗಲೇ ಕೆಲಸದ ಆದೇಶ ನೀಡಲಾಗಿದ್ದು ಸದರಿ ಕಾಮಗಾರಿಗಳನ್ನು ಇದುವರೆವಿಗೂ ನಿರ್ವಹಿಸಿಲ್ಲವಾದ್ದರಿಂದ ಸದರಿ ಕಾಮಕಾರಿಗಳಿಗೆ ಬದಲಾಗಿ 4.00ಲಕ್ಷ ರೂಪಾಯಿಗಳಿಗೆ ವೈಟ್ ಮೆಟಲ್ ಅಲಾಯಿಡ್ ಬೀದಿ ದೀಪಗಳನ್ನು ಖರೀದಿಸಿಕೊಡಬೇಕೆಂದು ಕೋರಿರುವ ಬಗ್ಗೆ ಒಪ್ಪಿ ತೀರ್ಮಾನ ಕೈಗೊಳ್ಳತಕ್ಕ ವಿಚಾರ.

**ತೀರ್ಮಾನ:8(12):–** ಕಾಮಗಾರಿಗಳ ಬದಲಾಗಿ ವೈಟ್ ಮೆಟಲ್ ಅಲಾಯಿಡ್ ಬೀದಿ ದೀಪಗಳನ್ನು ಖರೀದಿಸಿ ಅಳವಡಿಸುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:8(13):–** ಮಂಡ್ಯ ನಗರದ 17ನೇ ವಾರ್ಡ್‌ನಲ್ಲಿ ಕಿತ್ತೂರು ರಾಣಿ ಚನ್ನಮ್ಮ ವೃತ್ತದಿಂದ ಮಂಡ್ಯ ಡಯಾಗ್ನೋಸ್ಟಿಕ್ ಸೆಂಟರ್‌ವರೆಗೆ ಇರುವ ದೊಡ್ಡ ಮೋರಿಯಲ್ಲಿ ತುಂಬಿರುವ ಹೂಳನ್ನು ತೆಗೆಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(13):–** ದಿನಾಂಕ:31–1–2009ರ ಸಾಮಾನ್ಯ ಸಭೆಯಲ್ಲಿ ಪ್ರಭಾರ ನಗರಸಭಾಧ್ಯಕ್ಷರು ಘೋಷಿಸಿರುವ ಎಸ್.ಎಫ್.ಸಿ. ಅನುದಾನದಲ್ಲಿ ಅಭಿವೃದ್ಧಿ ಕಾಮಗಾರಿಗಾಗಿ ಪ್ರತೀ ವಾರ್ಡ್‌ಗೆ ತಲಾ 10.00ಲಕ್ಷ ರೂಪಾಯಿಗಳಲ್ಲಿ ಮಾಡಿಸುವುದೆಂದು ತೀರ್ಮಾನಿಸಲಾಯಿತು.

**ವಿಷಯ್ಯ:8(14)** ಮಾನ್ಯ ಸದಸ್ಯರಾದ ಶ್ರೀ. ಶಂಕರೇಗೌಡರವರಿಂದ ಬಂದಿರುವ ವಿಷಯ.

ವಾರ್ಡ್ ನಂಬರ್:35 ಗ್ರಾಮ ಠಾಣಾ ವ್ಯಾಪ್ತಿಯಲ್ಲಿದ್ದು ಕೈಬಿಟ್ಟಿರುವ ಮನೆ ಮತ್ತು ನಿವೇಶನಗಳ ಖಾತೆಗಳನ್ನು ನಗರಸಭಾ ವ್ಯಾಪ್ತಿಗೆ ಸೇರಿಸಿಕೊಳ್ಳುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(14):–** ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರ ರವರು ಮಾತನಾಡುತ್ತಾ, ಈ ವಿಷಯದ ಬಗ್ಗೆ ಹಿಂದಿನ ಸಭೆಗಳಲ್ಲಿ ನಿರ್ಣಯ ಕೈಗೊಂಡಿದ್ದು, ನಗರಸಭೆ ವ್ಯಾಪ್ತಿಯಲ್ಲಿ ದೇವೇಗೌಡನದೊಡ್ಡಿ, ಚಿಕ್ಕೇಗೌಡನದೊಡ್ಡಿ, ಗುತ್ತಲು, ಕಲ್ಲಹಳ್ಳಿ, ತಾವರೆಗೆರೆ, ಹಾಲಹಳ್ಳಿ, ಹೊಸಹಳ್ಳಿ ಪ್ರದೇಶಗಳಲ್ಲಿರುವ ಈ ಹಿಂದೆ ಗ್ರಾಮ ಠಾಣಾ ವ್ಯಾಪ್ತಿಗೆ ಸೇರಿದ್ದ ಮನೆ ಮತ್ತು ನಿವೇಶನಗಳ ಆಸ್ತಿ ಖಾತೆಗಳು ನಗರಸಭೆ ದಾಖಲಾತಿಗಳಲ್ಲಿ ಕೈಬಿಟ್ಟಿರುವುದರಿಂದ ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಿ ಕರ್ನಾಟಕ ಪುರಸಭೆಗಳ ಕಾಯ್ದೆ 1964ರ ನಿಯಮ 107ರ ಪ್ರಕಾರ ಪ್ರಕಟಣೆ ಹೊರಡಿಸಿ ಸಾರ್ವಜನಿಕರ ಗಮನಕ್ಕೆ ತಂದು ಆಕ್ಷೇಪಣೆಗಳಿದ್ದಲ್ಲಿ ಅವುಗಳನ್ನು ಪರಿಶೀಲಿಸಿ ಸದರಿ ಮನೆ ಮತ್ತು ನಿವೇಶನಗಳ ಖಾತೆಯನ್ನು ನಿಯಮಾನುಸಾರ ಇಂತಹ ಪ್ರಕರಣಗಳನ್ನು ವಿಶೇಷ ಪ್ರಕರಣಗಳು ಎಂದು ಪರಿಗಣಿಸಿ ನಗರಸಭಾ ವತಿಯಿಂದಲೇ ಪ್ರಕರಣಗಳನ್ನು ಗುರುತಿಸಿ ನಿವೇಶನ, ಕಟ್ಟಡ ಮಾಲೀಕರುಗಳಿಂದ ಪ್ರಸ್ತಾವನೆ ಪಡೆದು ಸಂಬಂಧಪಟ್ಟ ಸೂಕ್ತ ದರ ಪಾವತಿಸಿಕೊಂಡು ನಗರಸಭೆ ದಾಖಲಾತಿಗಳಲ್ಲಿ ದಾಖಲಿಸಲು ಶೀಘ್ರವಾಗಿ ಅಗತ್ಯ ಕ್ರಮ ವಹಿಸುವಂತೆ ಮತ್ತು ದೇವೇಗೌಡನದೊಡ್ಡಿ ಗ್ರಾಮ ಠಾಣೆಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಲೇಔಟ್ ನಕ್ಷೆಯನ್ನು ಸಹ ಒಪ್ಪಿ ಅನುಮೋದಿಸಲಾಯಿತು. ಇವರ ಸೂಚನೆಯನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿತು.

**ವಿಷಯ:8(15):–** ಮಾನ್ಯ ಸದಸ್ಯರಾದ ಶ್ರೀ.ಲೋಕೇಶ್‌ರವರಿಂದ ಬಂದಿರುವ ವಿಷಯ.

ಕಿರಗಂದೂರು ಗ್ರಾಮ ಸರ್ವೆ ನಂಬರ್:224/1ರಲ್ಲಿ 0–03½ಗುಂಟೆ ಜಮೀನನ್ನು ಸಾರ್ವಜನಿಕ ರಸ್ತೆ ನಿರ್ಮಾಣಕ್ಕಾಗಿ ನಗರಸಭೆ ವತಿಯಿಂದ ರೂ.3,08,820–00ಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿಯವರಿಗೆ ನೀಡಿರುವುದರಿಂದ ಜಮೀನು ಮಾಲೀಕರಿಗೆ ಇನ್ನೂ ಹಣ ಪಾವತಿಸದೇ ವಿಳಂಬ ಮಾಡುತ್ತಿರುವುದರಿಂದ ಸದರಿ ಮೊತ್ತವನ್ನು ವಾಪಸ್ಸು ನಗರಸಭೆಗೆ ಪಡೆದು ಸದರಿ ಮೊತ್ತವನ್ನು ನೇರವಾಗಿ ನಗರಸಭೆಯಿಂದ ನೀಡುವಂತೆ ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(15):–** ವಿಷಯದ ಬಗ್ಗೆ ಚರ್ಚಿಸಲಾಗಿ ಜಿಲ್ಲಾ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ಪತ್ರ ವ್ಯವಹಾರ ನಡೆಸಿ ಅವರ ಆದೇಶದ ಆದೇಶದ ಮೇರೆಗೆ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:8(16)–** ವಾರ್ಡ್ ನಂಬರ್:8, ಚಾಮುಂಡೇಶ್ವರಿ ನಗರದಲ್ಲಿ ಸುಬ್ಬಪ್ಪ ಗೋದಾಮು ಹತ್ತಿರ ಶ್ರೀ.ಬೊಬ್ಬೇಗೌಡರ ಶಿವಣ್ಣರವರ ಮನೆ ಮುಂದೆ ಇರುವ ವಿದ್ಯುತ್ ಕಂಬ ಮತ್ತು ಜೈಲ್ ಹಿಂಭಾಗದ ರಸ್ತೆಯಲ್ಲಿ ಶ್ರೀ.ಕೃಷ್ಣಮೂರ್ತಿ, ನಿವೃತ್ತ ಆರೋಗ್ಯ ನಿರೀಕ್ಷಕರ ಮನೆ ಮುಂದೆ ಇರುವ ವಿದ್ಯುತ್ ಕಂಬಗಳು ರಸ್ತೆ ಮಧ್ಯ ಭಾಗದಲ್ಲಿದ್ದು ಸದರಿ ವಿದ್ಯುತ್ ಕಂಬಗಳನ್ನು ರಸ್ತೆ ಬದಿಗೆ ಸ್ಥಳಾಂತರಿಸಿಕೊಡಲು ಕೋರಿರುವ ವಿಚಾರ.
**ತೀರ್ಮಾನ:8(16)**:– ವಿದ್ಯುತ್ ಕಂಬಗಳನ್ನು ರಸ್ತೆ ಬದಿಗೆ ಸ್ಥಳಾಂತರಿಸಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:8(17)**:– ಮಾನ್ಯ ಸದಸ್ಯರಾದ ಶ್ರೀಮತಿ:ಕೆ.ಭಾಗ್ಯಲಕ್ಷ್ಮಿರವರಿಂದ ಬಂದಿರುವ ವಿಷಯ.
ಮಂಡ್ಯ ನಗರದ ವಾರ್ಡ್ ನಂಬರ್:9ರಲ್ಲಿರುವ ಆರ್.ಟಿ.ಓ. ಕಛೇರಿ ಹತ್ತಿರದ ಕೊಳಚೆ ಪ್ರದೇಶದ ನಿವಾಸಿಗಳಿಗೆ ಮೂಲಭೂತ ಸೌಕರ್ಯಗಳನ್ನು, ಬೀದಿ ದೀಪದ ವ್ಯವಸ್ಥೆ ಮತ್ತೊ ಹಾಲಿ ಇರುವ ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಬೇಕೆಂದು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:8(17):–** ಪರಿಶೀಲಿಸಿ ಅವಶ್ಯಕತೆ ಇರುವ ಕೆಲಸಗಳನ್ನು ಮಾತ್ರ ಮಾಡಿಸಬಹುದೆಂದು ಸಭೆಯು ಸರ್ವಾನುಮತ ದಿಂದ ಒಪ್ಪಲಾಯಿತು.

**ವಿಷಯ:8(18):–** ಶ್ರೀ.ಕೆ.ವಿ.ಶಂಕರಗೌಡ ಸಾಂಸ್ಕೃತಿಕ ಪ್ರತಿಷ್ಠಾನ ಟ್ರಸ್ಟ್(ರಿ), ಶನಿ ಕೃಪ, ಕೆ.ಟಿ.501, 4ನೇ ಕ್ರಾಸ್, ಚಾಮುಂಡೇಶ್ವರಿನಗರ, ಮಂಡ್ಯ, ಅಧ್ಯಕ್ಷರು, ಮಾನ್ಯ ಶಾಸಕರು ಆದ ಎಂ.ಶ್ರೀನಿವಾಸ್‌ರವರು ಮನವಿ ಸಲ್ಲಿಸಿ ಪಿ.ಇ.ಎಸ್. ಇಂಜಿನಿಯರಿಂಗ್ ಕಾಲೇಜಿಗೆ ಹೋಗುವ ರಸ್ತೆಗೆ " ಕೆ.ವಿ.ಶಂಕರಗೌಡ ರಸ್ತೆ" ಎಂದು ನಾಮಕರಣ ಮಾಡಲಾಗಿದ್ದು ರಸ್ತೆಯ ಎರಡು ಕಡೆ ಸ್ವಾಗತ ಕಮಾನುಗಳನ್ನು ಮಾಡಿಸಿ ಅದರ ಮೇಲೆ "ಕೆ.ವಿ.ಶಂಕರಗೌಡ ರಸ್ತೆ" ಎಂದು ಹೆಸರನ್ನು ಬರೆಸಿ ಕೊಡಬೇಕೆಂದು ಕೋರಿರುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:8(18)**:– ರಸ್ತೆ ನಾಮಕರಣ ಮಾಡುವ ಬಗ್ಗೆ ಸರ್ಕಾರದ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸರ್ಕಾರದಿಂದ ಅನುಮತಿ ದೊರೆತ ನಂತರ ಅಂದಾಜು ಪಟ್ಟಿ ತಯಾರಿಸಿ ಸಭೆಯ ಮುಂದೆ ತರುವುದೆಂದು ತೀರ್ಮಾನಿಸಲಾಯಿತು.

**ವಿಷಯ:8(19):–** ಮಂಡ್ಯ ನಗರದ ಬನ್ನೂರು ರಸ್ತೆಯಲ್ಲಿ ನಗರಸಭೆಯು ಹತ್ತನೇ ಹಣಕಾಸು ಯೋಜನೆಯಡಿಯಲ್ಲಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳನ್ನು ದುರಸ್ತಿಗೊಳಿಸಲು ಅಂದಾಜು ರೂ.4.00ಲಕ್ಷಗಳ ದುರಸ್ತಿ ಕಾಮಗಾರಿ ನಿರ್ವಹಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವ ವಿಚಾರ.
**ತೀರ್ಮಾನ:8(19)**:– ಅಗತ್ಯ ಮಾಹಿತಿಗಳೊಂದಿಗೆ ಮುಂದಿನ ಸಭೆಗೆ ತರುವುದೆಂದು ತೀರ್ಮಾನಿಸಲಾಯಿತು.

**ವಿಷಯ:8(20):–** ಮಾನ್ಯ ಜಿಲ್ಲಾಧಿಕಾರಿಯವರ ಪತ್ರ ಸಂಖ್ಯೆ:ಎಂ.ಎ.ಜಿ.(2):517:2008–09 ದಿನಾಂಕ:16–4–2009ರ ಪತ್ರದಂತೆ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಕಾವೇರಿ ಉದ್ಯಾನವನದ ಸುತ್ತಲೂ ಸಂಪರ್ಕವಿರುವ ರಸ್ತೆಗಳಲ್ಲಿ ಸಾರ್ವಜನಿಕರು ಬೆಳಿಗ್ಗೆ ಮತ್ತು ಸಂಜೆ ವಾಯು ವಿಹಾರ ಮಾಡುತ್ತಿದ್ದು ಈ ಸಂದರ್ಭದಲ್ಲಿ ಸಂಜೆ 6 ಗಂಟೆಯಿಂದ ರಾತ್ರಿ 9 ಗಂಟೆವರೆಗೆ ಸದರಿ ಪ್ರದೇಶದಲ್ಲಿ ವಾಹನಗಳ ಸಂಚಾರವನ್ನು ನಿಷೇಧಿಸಲು 8 ಕಬ್ಬಿಣದ ಗೇಟುಗಳನ್ನು ನಿರ್ಮಾಣ ಮಾಡಲು ಹಾಗೂ ಸದರಿ ಕಾಮಗಾರಿಯನ್ನು ಮಾಡಿಸಲು ನಗರಸಭೆಯಿಂದ ವೆಚ್ಚ ಭರಿಸಲು ಕೋರಿರುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:8(20)**:– ನಗರಸಭೆ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲವಾದ್ದರಿಂದ ಹಾಗೂ ಸದರಿ ಗೇಟ್‌ಗಳನ್ನು ಅಳವಡಿಸುವುದು ಅವಶ್ಯಕತೆ ಇರುವುದಿಲ್ಲವಾದ್ದರಿಂದ ಮಾನ್ಯ ಜಿಲ್ಲಾಧಿಕಾರಿಯವರ ಅನುದಾನದಿಂದಲೇ ಮಾಡಿಸಿಕೊಳ್ಳುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:8(21):–** ಮಂಡ್ಯ ನಗರದ ಸಾರ್ವಜನಿಕರಿಗೆ ಅನುಕೂಲವಾಗುವಂತೆ ನಗರಸಭೆ ವತಿಯಿಂದ ಒಂದು ಸಂಖ್ಯೆ ಆಂಬುಲೆನ್ಸ್ ವಾಹನದ ವ್ಯವಸ್ಥೆ ಮಾಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:8(21)**:– ನಗರಸಭೆ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲವಾದ್ದರಿಂದ ವಿಷಯವನ್ನು ಚರ್ಚೆಯಿಂದ ಕೈಬಿಡಲಾಯಿತು.

**ವಿಷಯ:8(22):–** ಶ್ರೀ.ಕೆ.ಸಿ.ಶಿವಶಂಕರ್, ಬಿನ್.ಚನ್ನೇಗೌಡ, ರೈಲ್ವೆ ಗೇಟ್ ರಸ್ತೆ, ಕಲ್ಲಹಳ್ಳಿ ಇವರು ಮನವಿ ಸಲ್ಲಿಸಿ ವ್ಯವಸ್ಥಾಪಕ ನಿರ್ದೇಶಕರ ಕಛೇರಿ, ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾ ಮಂಡಳಿ ನಿಯಮಿತ, ಮೈಸೂರುರವರಿಂದ ಚಿಲ್ಲರೆ ಮೀನು ಮಾರಾಟ ಮಳಿಗೆಗಳನ್ನು ಸ್ಥಾಪಿಸಲು ಜಿಲ್ಲಾ ಆಸ್ಪತ್ರೆ ರಸ್ತೆಯಲ್ಲಿ 10'X10'ಅಡಿ ಜಾಗವನ್ನು ಕೋರಿರುವುದರಿಂದ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(22):–** ವಿಷಯವನ್ನು ಸ್ಥಾಯಿ ಸಮಿತಿ ಸಭೆಗೆ ತಂದು ಸ್ಥಳ ಪರಿಶೀಲನೆ ಮಾಡಿ ಜಿಲ್ಲಾಧಿಕಾರಿಗಳ ಅನುಮತಿ ಪಡೆದು ನಂತರ ಮುಂದಿನ ಕ್ರಮ ವಹಿಸುವುದೆಂದು ಸದಸ್ಯರಾದ ಶ್ರೀ.ಕೆ.ಎಲ್.ನಾಗೇಂದ್ರರವರ ಸೂಚನೆಯನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:8(23):–** ಹನ್ನೆರಡನೇ ಹಣಕಾಸು ಯೋಜನೆಯ 2ನೇ ಮತ್ತು 3ನೇ ಕಂತಿನಲ್ಲಿ ಕಟ್ಟಡದ ದುರಸ್ತಿಗಾಗಿ ಬಿಡುಗಡೆಯಾಗಿರುವ 1.50ಲಕ್ಷ ರೂಪಾಯಿಗಳಲ್ಲಿ ಮಂಡ್ಯ ನಗರಸಭೆಯ ಶ್ರೀ ಜಯಚಾಮರಾಜೇಂದ್ರ ಟೌನ್ ಹಾಲ್ ಕಟ್ಟಡ ದುರಸ್ತಿ ಕಾಮಗಾರಿ ಮಾಡಿಸಲು ಅನುಮೋದನೆ ನೀಡುವ ವಿಚಾರ ಮತ್ತು ಬಾಡಿಗೆ ದರವನ್ನು ಪರಿಷ್ಕರಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(23):–** ನಗರಸಭೆಯ ಶ್ರೀ ಜಯಚಾಮರಾಜೇಂದ್ರ ಟೌನ್ ಹಾಲ್ ಕಟ್ಟಡವನ್ನು ದುರಸ್ತಿ ಮಾಡಿಸಿ ಆಧುನೀಕರಣಗೊಳಿಸಿ, ಶೌಚಾಲಯಗಳ ವ್ಯವಸ್ಥೆ ಮಾಡಿಸಿ ನಂತರ ಈ ಕೆಳಕಂಡಂತೆ ಬಾಡಿಗೆ ದರವನ್ನು ಪರಿಷ್ಕರಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

(1) ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ದಿನ ಒಂದಕ್ಕೆ ಬಾಡಿಗೆ ರೂ. 750–00(ಏಳುನೂರ ಐವತ್ತು ರೂಪಾಯಿಗಳು)

(2) ವಾಣಿಜ್ಯ ಕಾರ್ಯಕ್ರಮಗಳಿಗೆ ದಿನ ಒಂದಕ್ಕೆ ಬಾಡಿಗೆ ರೂ.1250–00(ಒಂದುಸಾವಿರದಐವತ್ತುರೂಪಾಯಿಗಳು)

**ವಿಷಯ:8(24):–** ಮಾನ್ಯ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:3–7–2009ರಂದು ವಿಕಾಸ ಸೌಧ, ಬೆಂಗಳೂರು ಇಲ್ಲಿ ಸಭೆ ನಡೆಸಿ ಪಟ್ಟಣ ಮತ್ತು ನಗರಸಭೆಗೆ ನಿರಂತರ ಕುಡಿಯುವ ನೀರು ಸರಬರಾಜು (24X7) ಪೂರೈಕೆಯ ಕಡೆಗೆ ದಿನನಿತ್ಯ 24 ಗಂಟೆಗಳ ಕಾಲ ವಿತರಣಾ ಜಾಲದಲ್ಲಿ ನಿರಂತರವಾಗಿ ನೀರು ಸರಬರಾಜು ಮಾಡುವುದಾಗಿ ತಿಳಿಸಿರುತ್ತಾರೆ. ಒಟ್ಟು ಯೋಜನಾ ವೆಚ್ಚ ರೂ.**66.60**ಕೋಟಿಗಳಾಗಿದ್ದು, ಇದರಲ್ಲಿ ರಾಜ್ಯ ಸರ್ಕಾರದ ಅನುದಾನ ಶೇಕಡ 60%, ಹಣಕಾಸು ಸಂಸ್ಥೆಗಳಿಂದ ಶೇಕಡ 25% ಮತ್ತು ಸ್ಥಳೀಯ ಸಂಸ್ಥೆಗಳಿಂದ ಶೇಕಡ 15% ಭರಿಸುವುದೆಂದು ನಿಗಧಿಪಡಿಸಲಾಗಿದ್ದು, ಈ ಸಂಬಂಧ ನಗರಸಭೆಯ ಭಾಗಾಂಶವನ್ನು ಭರಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(24):–** ಮಂಡ್ಯ ನಗರಕ್ಕೆ ನಿರಂತರ ನೀರು ಸರಬರಾಜು (24X7) ಯೋಜನೆಯನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆಯ ಕುರಿತು ಮಾನ್ಯ ನಗರಾಭಿವೃದ್ಧಿ ಸಚಿವರು ಕರ್ನಾಟಕ ಸರ್ಕಾರ ಇವರು ಮಾನ್ಯ ನಗರಸಭಾಧ್ಯಕ್ಷರು ಹಾಗೂ ಪೌರಾಯುಕ್ತರೊಡನೆ ದಿನಾಂಕ:3–7–2009ರಂದು ಚರ್ಚಿಸಿರುವ ಹಿನ್ನೆಲೆಯಲ್ಲಿ ಈ ಉದ್ದೇಶಿತ ಮಹತ್ವಾಕಾಂಕ್ಷಿ ಯೋಜನೆಯ ರೂಪುರೇಷಗಳು ಮತ್ತು ಸಾಧಕ ಬಾಧಕಗಳ ಕುರಿತು ಜಲ ಮಂಡಳಿಯ ಕಾರ್ಯಪಾಲಕ ಅಭಿಯಂತರರು ಸಭೆಗೆ ತಿಳಿಯಪಡಿಸಿದರು. ಅದರಂತೆ ಈ ಯೋಜನೆಯನ್ನು ನಗರಸಭೆ ಹಾಗೂ ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ಕರ್ನಾಟಕ ಜಲ ಮಂಡಳಿ ವತಿಯಿಂದ ಕೈಗೆತ್ತಿಕೊಳ್ಳುವ ಕುರಿತು ಸರ್ವ ಸದಸ್ಯರು ಸುದೀರ್ಘವಾಗಿ ಚರ್ಚಿಸಿ, ಸದರಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ಅಂಗೀಕರಿಸಲಾಯಿತು. ಹಾಗೂ,

(1) ಮಂಡ್ಯ ನಗರಕ್ಕೆ "**ಕನ್ನಡ ಗಂಗಾ**" ನಿರಂತರ ನೀರು ಸರಬರಾಜು (24X7) ಯೋಜನೆಯನ್ನು ನಗರಸಭೆ ಹಾಗೂ ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ **ಕರ್ನಾಟಕ ಜಲ ಮಂಡ**ಳಿ ವತಿಯಿಂದ ಕೈಗೆತ್ತಿಕೊಂಡು ಅನುಷ್ಠಾನಗೊಳಿಸುವುದು.

(2) ಯೋಜನೆಯ ಒಟ್ಟು ಯೋಜನಾ ವೆಚ್ಚದಲ್ಲಿ ರಾಜ್ಯ ಸರ್ಕಾರದ ಅನುದಾನ 60%, ಹಣಕಾಸು ಸಂಸ್ಥೆಗಳಿಂದ 25% ಮತ್ತು ಸ್ಥಳೀಯ ಸಂಸ್ಥೆಗಳಿಂದ ಅಂದರೆ ನಗರಸಭೆ ವತಿಯಿಂದ 15% ರಷ್ಟು ಹಣವನ್ನು ಭರಿಸುವುದು.

(3) ಯೋಜನೆಯನ್ನು **ಕರ್ನಾಟಕ ಜಲ ಮಂಡಳಿ**ಯು ನಗರಸಭೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸಿದ ನಂತರ ಮುಂದಿನ ನಿರ್ವಹಣೆಯನ್ನು ಮಂಡಳಿ ವತಿಯಿಂದ ಕೈಗೊಳ್ಳಲು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:8(25):–** ಶ್ರೀ.ಮಹಮ್ಮದ್ ಸೋಹಲ್ ಬಿನ್.ಲೇ||ಎಂ.ಪಶುದ್ದೀನ್, ಬೆಂಗಳೂರುರವರು ಕಛೇರಿಗೆ ಅರ್ಜಿ ಸಲ್ಲಿಸಿ ಗುತ್ತಲು ಗ್ರಾಮ ಸರ್ವೆ ನಂಬರ್:532/2ರಲ್ಲಿ 0–39ಗುಂಟೆ ಪ್ರದೇಶಕ್ಕೆ ಅನ್ಯಕ್ರಾಂತ ಮಂಜೂರಾಗಿದ್ದು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಿಂದ ವಸತಿ ಉದ್ದೇಶಕ್ಕಾಗಿ ನಕ್ಷೆ ಅನುಮೋದನೆಗೊಂಡಿದ್ದು ಅವರೇ ಸ್ವಂತ ಖರ್ಚಿನಿಂದ ಎಲ್ಲಾ ಕಾಮಗಾರಿಗಳನ್ನು (ಮೂಲಭೂತ ಸೌಕರ್ಯಗಳನ್ನು) ನಿರ್ವಹಿಸಿಕೊಳ್ಳುತ್ತಿರುವುದರಿಂದ ಸದರಿ ಸ್ವತ್ತಿಗೆ ನಗರಸಭೆಯಲ್ಲಿ ಖಾತೆ ದಾಖಲೆ ಮಾಡಿ ಕೊಡುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:8(25):–** ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸುವುದೆಂದು ತೀರ್ಮಾನಿಸಲಾಯಿತು ಹಾಗೂ ನಗರಸಭೆಗೆ ಬರಬೇಕಾದ ಅಭಿವೃದ್ಧಿ ಶುಲ್ಕ ಪಾವತಿಸಿಕೊಂಡು ಖಾತೆ ದಾಖಲೆ ಮಾಡಿಕೊಡುವುದೆಂದು ತೀರ್ಮಾನಿಸಲಾಯಿತು.

**ವಿಷಯ:8(26):–** ವಾರ್ಡ್ ನಂಬರ್:21ರಲ್ಲಿ ವಿದ್ಯುತ್ ಕಂಬ ಅಳವಡಿಸಲು ಸೆಸ್ಕಂ ಮಂಡ್ಯರವರು ತಯಾರಿಸಿರುವ ಅಂದಾಜು ವೆಚ್ಚ ರೂ.2,07,863–00ಗಳನ್ನು ಪಾವತಿಸಲು ಒಪ್ಪಿಗೆ ನೀಡುವ ಬಗ್ಗೆ ದಿನಾಂಕ:19–7–2008ರ ಸಭೆ ವಿಷಯ 24ರ ತೀರ್ಮಾನದಂತೆ ರೂ.1,50,973–00ಗಳನ್ನು ಪಾವತಿಸಲು ತೀರ್ಮಾನವಾಗಿರುತ್ತದೆ. ಇನ್ನು ಉಳಿಕೆ ರೂ.56,890–00 ಗಳನ್ನು ಪಾವತಿಸುವ ಬಗ್ಗೆ ಒಪ್ಪಿಗೆ ನೀಡುವ ವಿಚಾರ.
**ತೀರ್ಮಾನ:8(26):–** ಉಳಿಕೆ ರೂ.56,890–00ಗಳನ್ನು ಸೆಸ್ಕಂರವರಿಗೆ ಪಾವತಿಸಲು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:8(27):–** ಮಂಡ್ಯ ನಗರ, ವಾರ್ಡ್ ನಂಬರ್:11, ಗಾಂಧಿನಗರ 2ನೇ ಕ್ರಾಸ್ ಸರ್ಕಾರಿ ಪ್ರಾಥಮಿಕ ಶಾಲೆಯ ಕಾಂಪೌಂಡನ್ನು ಚುನಾವಣಾ ಸಂದರ್ಭದಲ್ಲಿ ದುರಸ್ತಿಗೊಳಿಸಲಾಗಿದ್ದು ಸದರಿ ಕಾಮಗಾರಿ ಬಾಬ್ತು ವೆಚ್ಚ ರೂ.12,000–00 ಗಳನ್ನು ಪಾವತಿಸಲು ಒಪ್ಪಿಗೆ ನೀಡುವ ವಿಚಾರ.
**ತೀರ್ಮಾನ:8(27):–** ಮಾನ್ಯ ಜಿಲ್ಲಾಧಿಕಾರಿಗಳವರ ಸೂಚನೆ ಮೇರೆಗೆ ಕೆಡವಿ ಹಾಕಿದ್ದ ಕಾಂಪೌಂಡನ್ನು ದುರಸ್ತಿಗೊಳಿಸಿದ ಬಾಬ್ತು ರೂ.12,000/–ಗಳನ್ನು ಪಾವತಿಸಲು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:8(28):–** ಮಂಡ್ಯ ನಗರಸಭೆಯ ಕಛೇರಿ ಕಟ್ಟಡದ ಮೇಲ್ಭಾಗದಲ್ಲಿ ವೈರ್‌ಲೆಸ್ ಟವರ್ ನಿರ್ಮಿಸುವ ಬಗ್ಗೆ ಅನುಮತಿ ಕೋರಿರುವ ವಿಚಾರ.
**ತೀರ್ಮಾನ:8(28):–** ಕಾನೂನು ಅನುಸರಿಸಿ ನೀಡುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:8(29):–** ಬೆಂಗಳೂರು–ಮೈಸೂರು ಹೆದ್ದಾರಿ ಎಂ.ಸಿ.ರಸ್ತೆಯಲ್ಲಿ ರೋಡ್ ಡಿವೈಡರ್ ಸೇಫ್ಟಿ ಗ್ರಿಲ್ಸ್ ಅಂಡ್ ಗ್ಲೋ ಗ್ಲೋ ಸೈನ್ ಬೋರ್ಡ್‌ಗಳನ್ನು ಅಳವಡಿಸುವ ಬಗ್ಗೆ ಶ್ರೀ.ಕೃಷ್ಣ ಆರ್ಟ್ಸ್ ಬೆಂಗಳೂರುರವರು ಪತ್ರ ಬರೆದು ಅನುಮತಿ ಕೋರಿರುವ ವಿಚಾರ.
**ತೀರ್ಮಾನ:8(29):–** ಅನುಮತಿ ನೀಡುವುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:8(30):–** ಮಾನ್ಯ ಜಿಲ್ಲಾಧಿಕಾರಿಗಳಿಂದ ಬಂದಿರುವ ಪತ್ರದ ಮೇರೆಗೆ, ತೂಬಿನಕೆರೆ ಹತ್ತಿರ ಮರಳು ಲಾರಿಗಳನ್ನು ತಪಾಸಣೆ ಮಾಡಲು ಒಂದು ಚೆಕ್ ಪೋಸ್ಟ್ ನಿರ್ಮಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:8(30):–** ತೂಬಿನಕೆರೆ ಪ್ರದೇಶವು ಮಂಡ್ಯ ನಗರಸಭೆ ವ್ಯಾಪ್ತಿಗೆ ಬಾರದಿರುವುದರಿಂದ ನಗರ ಸಭೆಯಿಂದ ಚೆಕ್ ಪೋಸ್ಟ್ ನಿರ್ಮಿಸಲು ಬರುವುದಿಲ್ಲವೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:8(31)**:–ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯರವರ ಪತ್ರ ಸಂಖ್ಯೆ:ಮುನಿಸಿ(2)ಸಿಆರ್/269/2007–08 ದಿನಾಂಕ:17–2–2009ರಂತೆ ಶ್ರೀಮತಿ:ದೊಡ್ಡತಾಯಮ್ಮ, ಬಿನ್.ಕೆಂಗಯ್ಯರವರ ಖಾತಾ ನಂಬರ್:ಡಿ3/1270/2170/ಎ.ಹೆಚ್.ರಲ್ಲಿ ಸಾರ್ವಜನಿಕ ರಸ್ತೆಗಾಗಿ ಉಪಯೋಗಿಸಿಕೊಂಡಿರುವ $\frac{15'+12'}{2}$x60 ಅಡಿ ವಿಸ್ತೀರ್ಣಕ್ಕೆ ಉಪ ನೋಂದಣಾಧಿಕಾರಿಗಳ ಪ್ರಸಕ್ತ ಸಾಲಿನ ಗೈಡೆನ್ಸ್ ವ್ಯಾಲ್ಯೂ ದರದಲ್ಲಿ ಮಂಡ್ಯ ನಗರಸಭಾ ನಿಧಿಯಿಂದ ಅರ್ಜಿದಾರರಿಗೆ ರೂ.1,13,400–00ಗಳನ್ನು ಪಾವತಿಸುವುದರ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:8(31):–** ಸಂಪೂರ್ಣ ಮಾಹಿತಿಗಳೊಂದಿಗೆ ಸ್ಥಾಯಿ ಸಮಿತಿಗೆ ತುರುವುದೆಂದು ತೀರ್ಮಾನಿಸಲಾಯಿತು.

**ವಿಷಯ:8(32):–** 2008–09ನೇ ಸಾಲಿಗೆ 12ನೇ ಹಣಕಾಸು ಯೋಜನೆಯಡಿ (ಮುಕ್ತ ನಿಧಿ) ಬಿಡುಗಡೆಯಾಗಿರುವ ರೂ.10.84ಲಕ್ಷ ಮತ್ತು ರೂ.10.84ಲಕ್ಷ ಒಟ್ಟು ರೂ.21.68ಲಕ್ಷಗಳಿಗೆ ಎಂ.ಸಿ.ರಸ್ತೆಯಲ್ಲಿ ಅಳವಡಿಸಿರುವ ಟ್ಯೂಬಿಲಾರ್ ಪೋಲ್‌ಗಳು ತುಂಬಾ ಹಳೆಯದಾಗಿದ್ದು ಮತ್ತು ಕೇಬಲ್‌ಗಳು ಈಗಾಗಲೇ ಸುಟ್ಟು ಹೋಗಿರುವುದರಿಂದ ಕಲ್ಲಹಳ್ಳಿಯಿಂದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದವರೆಗೆ ಮತ್ತು ಸುರೇಶ್ ಪೆಟ್ರೋಲ್ ಬಂಕ್‌ನಿಂದ ನಂದಾ ಚಿತ್ರಮಂದಿರದವರೆಗೆ ಟ್ಯೂಬುಲಾರ್ ಪೋಲ್‌ಗಳನ್ನು ಮತ್ತು ಕೇಬಲ್ ಅಳವಡಿಸಿ ಬೀದಿ ದೀಪಗಳನ್ನು ಹಾಕುವುದು. ಅಂದಾಜು ವೆಚ್ಚ ರೂ.20.00ಲಕ್ಷಗಳು. ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಅನುಮೋದನೆ ನೀಡುವ ವಿಚಾರ.
**ತೀರ್ಮಾನ:8(32):–** ಸಭೆಯು ಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು.
(1)ಕಲ್ಲಹಳ್ಳಿಯಿಂದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದವರೆಗೆ
(2) ಸುರೇಶ್ ಪೆಟ್ರೋಲ್ ಬಂಕ್‌ನಿಂದ ನಂದಾ ಚಿತ್ರಮಂದಿರದವರೆಗೆ.

**ವಿಷಯ:8(33):–** ವಾರ್ಡ್ ನಂಬರ್:17, ಬಿ.ವಿ.ಕೆ.ಲೇಔಟ್‌ನ 2ನೇ ಮತ್ತು 3ನೇ ಕ್ರಾಸ್‌ನಲ್ಲಿ ಬೀದಿ ದೀಪದ ಕಂಬ ಅಳವಡಿಸುವ ಬಾಬ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ, ಮಂಡ್ಯರವರಿಗೆ ರೂ.47,955–00ಗಳನ್ನು ಪಾವತಿಸುವ ಬಗ್ಗೆ ಅನುಮೋದನೆ ನೀಡುವ ವಿಚಾರ.
**ತೀರ್ಮಾನ:8(33):–** ಪಾವತಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ:8(34):–**ಶ್ರೀ.ಎಂ.ವಿ.ಅನಿಲ್ ಬಿನ್. ಎಂ.ಜೆ.ವಸಂತಕುಮಾರ್ ಬಾಬ್ತು ಧರಣಪ್ಪ ಮಾರ್ಕೆಟ್ ಹಿಂಭಾಗದ ಮಂಡ್ಯ ಗ್ರಾಮ ಸರ್ವೆ ನಂಬರ್:885ರಲ್ಲಿ 0–03ಗುಂಟೆ ಪ್ರದೇಶಕ್ಕೆ ಅನ್ಯಕ್ರಾಂತ ಮಂಜೂರಾಗಿದ್ದು ಈಗಾಗಲೇ ಸಾರ್ವಜನಿಕ ರಸ್ತೆಗಾಗಿ ಉಪಯೋಗಿಸುತ್ತಿರುವುದರಿಂದ ಉಚ್ಚ ನ್ಯಾಯಾಲಯದಲ್ಲಿ ಸದರಿ ಸ್ವತ್ತನ್ನು 3 ತಿಂಗಳೊಳಗಾಗಿ ಖಾತೆ ಮಾಡಿಕೊಡಲು ಆದೇಶ ನೀಡಿದ್ದು ಈಗಾಗಲೇ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯಿಂದ ಭೂಸ್ವಾಧೀನ ಪ್ರಕ್ರಿಯೆ ಮೂಲಕ ಸ್ವಾಧೀನಕ್ಕೆ ಪಡೆಯಲು ಸೂಚಿಸಿರುತ್ತಾರೆ. ಈಗಾಗಲೇ ವಿಳಂಬವಾಗಿರುವುದರಿಮದ ಹಾಗೂ ರಸ್ತೆಗಾಗಿ ಉಪಯೋಗಿಸುತ್ತಿರುವ 17'X23'ಅಡಿಗಳು ಮತ್ತು 134'X20'ಅಡಿಗಳಿಗೆ ಉಪ ನೋಂದಣಾಧಿಕಾರಿಗಳ ಈಗಿನ ಮಾರುಕಟ್ಟೆ ದರ ಚದರಡಿ ಒಂದಕ್ಕೆ ರೂ.625–00 (ಆರುನೂರ ಇಪ್ಪತ್ತೈದು ರೂಪಾಯಿಗಳು ಮಾತ್ರ) ಗಳಂತೆ ಒಟ್ಟು ಮೊತ್ತ ರೂ.19,19,375–00 (ಹತ್ತೊಂಭತ್ತು ಲಕ್ಷ ಹತ್ತೊಂಭತ್ತು ಸಾವಿರ ಮೂರುನೂರ ಎಪ್ಪತ್ತೈದು ರೂಪಾಯಿಗಳು ಮಾತ್ರ)ಗಳನ್ನು ಪರಿಹಾರ ನೀಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:8(34):–** ಸದಸ್ಯರಾದ ಶ್ರೀ.ಎಂ.ಎಲ್.ಮಂಜುನಾಥ್‌ರವರು ಮಾತನಾಡುತ್ತಾ , ಕಾನೂನು ಸಲಹೆ ಪಡೆದು ಮುಂದಿನ ಸಭೆಗೆ ತರುವುದೆಂದು ಸೂಚಿಸಿದರು. ಸದರಿಯವರ ಸೂಚನೆಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಲಾಯಿತು.

.

**ವಿಷಯ:8(35):–** ಶ್ರೀ.ಹೆಚ್.ಜಿ.ಚಂದ್ರಶೇಖರಯ್ಯ, ಲೆಕ್ಕಾಧೀಕ್ಷಕರು, ನಗರಸಭೆ, ಮಂಡ್ಯರವರು ಮನವಿ ಸಲ್ಲಿಸಿ ವೈದ್ಯಕೀಯ ವೆಚ್ಚ ರೂ.18,445–00ರೂ.ಗಳ ಬಿಲ್ಲು ಮರುಪಾವತಿಗಾಗಿ ಕೋರಿರುವುದರಿಂದ ವೈದ್ಯಕೀಯ ವೆಚ್ಚದ ಬಿಲ್ಲು ಮರುಪಾವತಿಸಲು ಮಂಜೂರಾತಿ ನೀಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:8(35):–** ನಿಯಮಾನುಸಾರ ಪರಿಶೀಲಿಸಿ ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡುವುದೆಂದು ತೀರ್ಮಾನಿಸ ಲಾಯಿತು.

**ವಿಷಯ:8(36):–** ಶ್ರೀಮತಿ:ಜಯಮ್ಮ ಕೋಂ.ಲೇಟ್‌॥ಪುಟ್ಟಸ್ವಾಮಿ, 'ಡಿ' ಗ್ರೂಪ್ ನೌಕರರು, ನಗರಸಭೆ, ಮಂಡ್ಯ ಇವರು ಮನವಿ ಸಲ್ಲಿಸಿ ವೈದ್ಯಕೀಯ ವೆಚ್ಚದ ಬಾಬ್ತು ಬಿಲ್ ಮೊಬಲಗು ರೂ.16,026–00ಗಳನ್ನು ಮರುಪಾವತಿಗಾಗಿ ಕೋರಿದ್ದು, ವೈದ್ಯಕೀಯ ವೆಚ್ಚದ ಬಿಲ್ಲು ಮೊಬಲಗನ್ನು ಮರುಪಾವತಿಸಲು ಒಪ್ಪಿಗೆ ನೀಡುವ ವಿಚಾರ.
**ತೀರ್ಮಾನ:8(36):–** ನಿಯಮಾನುಸಾರ ಪರಿಶೀಲಿಸಿ ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡುವುದೆಂದು ತೀರ್ಮಾನಿಸ ಲಾಯಿತು.

**<u>ವಿಷಯ:8(37):–</u>** ಶ್ರೀ: ಪುಟ್ಟಯ್ಯ ಬಿನ್. ನಿಂಗಯ್ಯ, 'ಡಿ' ಗ್ರೂಪ್ ನೌಕರರು, ನಗರಸಭೆ, ಮಂಡ್ಯ ಇವರು ಮನವಿ ಸಲ್ಲಿಸಿ ವೈದ್ಯಕೀಯ ವೆಚ್ಚದ ಬಾಬ್ತು ಬಿಲ್ ಮೊಬಲಗು ರೂ.25,450–00ಗಳನ್ನು ಮರುಪಾವತಿಗಾಗಿ ಕೋರಿದ್ದು, ಸದರಿ ವೈದ್ಯಕೀಯ ವೆಚ್ಚದ ಬಿಲ್ಲು ಮೊಬಲಗನ್ನು ಮರುಪಾವತಿಸಲು ಒಪ್ಪಿಗೆ ನೀಡುವ ವಿಚಾರ.
**<u>ತೀರ್ಮಾನ:8(37)</u>:–** ನಿಯಮಾನುಸಾರ ಪರಿಶೀಲಿಸಿ ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡುವುದೆಂದು ತೀರ್ಮಾನಿಸ ಲಾಯಿತು.

**<u>ವಿಷಯ:8(38):–</u>** ಶ್ರೀಮತಿ:ಗೌರಮ್ಮ ಕೋಂ.ತಿಮ್ಮಯ್ಯ, ಪೌರಕಾರ್ಮಿಕರು, ನಗರಸಭೆ, ಮಂಡ್ಯ ಇವರು ಮನವಿ ಸಲ್ಲಿಸಿ ವೈದ್ಯಕೀಯ ವೆಚ್ಚದ ಬಾಬ್ತು ಬಿಲ್ ಮೊಬಲಗು ರೂ.1,82,466–00ಗಳನ್ನು ಮರುಪಾವತಿಗಾಗಿ ಕೋರಿದ್ದು, ಸದರಿ ವೈದ್ಯಕೀಯ ವೆಚ್ಚದ ಬಿಲ್ಲು ಮೊಬಲಗನ್ನು ಮರುಪಾವತಿಸಲು ಒಪ್ಪಿಗೆ ನೀಡುವ ವಿಚಾರ.
**<u>ತೀರ್ಮಾನ:8(38)</u>:–** ನಿಯಮಾನುಸಾರ ಪರಿಶೀಲಿಸಿ ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡುವುದೆಂದು ತೀರ್ಮಾನಿಸ ಲಾಯಿತು.

**<u>ವಿಷಯ:8(39):–</u>** ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವ ಪ್ರದೇಶಗಳ ಸ್ಥಳ ಪರಿಶೀಲಿಸಿ ಅಗತ್ಯವಿರುವ ಕಡೆ ಅವಶ್ಯ ನೀರು ಸರಬರಾಜು ಕಾಮಗಾರಿಗಳನ್ನು ಮಾಡಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರಿಂದ ಅಂದಾಜು ಪಟ್ಟಿ ತಯಾರಿಸಿ ನೀರಿನ ಅನುಕೂಲ ಕಲ್ಪಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**<u>ತೀರ್ಮಾನ:8(39)</u>:–** ನೀರು ಸರಬರಾಜು ಕಾಮಗಾರಿಗಾಗಿ ಬಿಡುಗಡೆಯಾಗಿರುವ 7.50ಲಕ್ಷ ರೂಪಾಯಿಗಳಲ್ಲಿ ತುರ್ತಾಗಿ ಈ ಕೆಳಕಂಡ ಕಾಮಗಾರಿಗಳನ್ನು ಮಾಡಿಸುವುದೆಂದು ಸಭೆಯು ಒಪ್ಪಿ ತೀರ್ಮಾನಿಸಲಾಯಿತು.

| | | |
|---|---|---|
| 1) | ವಾರ್ಡ್ ನಂಬರ್:1ರಲ್ಲಿ ಪೆಟ್ರೋಲ್ ಬಂಕ್ ನಿಂದ ನಂದಾ ಟಾಕೀಸ್ ಹಿಂಬಾಗದ ಸ್ಲಂ ಪ್ರದೇಶದವರೆಗೆ 90ಎಂ.ಎಂ.ಡಯಾ ಪಿ.ವಿ.ಸಿ.ಪೈಪ್ ಲೈನ್ ಅಳವಡಿಸಿ ನೀರು ಸರಬರಾಜು ಸೌಕರ್ಯ ಕಲ್ಪಿಸುವುದು. | ಅಂದಾಜು ಮೊತ್ತ ರೂ. 2,60,000–00 |
| 2) | ವಾರ್ಡ್ ನಂಬರ್:35, ಷುಗರ್ ಟೌನ್ ಹೊಸ ಬಡಾವಣೆಯಲ್ಲಿರುವ ಬೋರ್‌ವೆಲ್‌ಗೆ ಪವರ್ ಮೋಟಾರ್ ಅಳವಡಿಸುವುದು ಮತ್ತು ದೇವೇಗೌಡನದೊಡ್ಡಿಯಲ್ಲಿ 1 ಸಂಖ್ಯೆ ಮತ್ತು ಷುಗರ್ ಟೌನನಲ್ಲಿ 1 ಸಂಖ್ಯೆ ಬೋರ್‌ವೆಲ್‌ಗಳನ್ನು ಕೊರೆಸಿ ಕೈಪಂಪ್ ಅಳವಡಿಸುವುದು. | ಅಂದಾಜು ಮೊತ್ತ ರೂ. 1,75,000–00 |
| 3) | 5ನೇ ವಾರ್ಡ್ ಅಜಾದ್‌ನಗರ ಮುಸ್ಲಿಂ ಬ್ಲಾಕ್‌ನಲ್ಲಿ ಬೋರ್‌ವೆಲ್ ಕೊರೆದು ಪವರ್ ಪಂಪ್ ಅಳವಡಿಸುವುದು. | ಅಂದಾಜು ಮೊತ್ತ ರೂ. 1,30,000–00 |
| 4) | 16ನೇ ವಾರ್ಡ್ ಹೊಸಹಳ್ಳಿ 1,2,3 ಮತ್ತು 4ನೇ ಕ್ರಾಸ್‌ಗಳಲ್ಲಿ ಒಂದು ಸಂಖ್ಯೆ 5ಹೆಚ್.ಪಿ.ಸಬ್‌ಮರ್ಸಿಬಲ್ ಪಂಪ್ ಅಳವಡಿಸುವುದು. | ಅಂದಾಜು ಮೊತ್ತ ರೂ. 92,000–00 |
| 5) | 34ನೇ ವಾರ್ಡ್ ಚನ್ನಯ್ಯ ಬಡಾವಣೆ ಮತ್ತು ಚಿಕ್ಕೇಗೌಡನದೊಡ್ಡಿಯಲ್ಲಿ 90ಎಂ.ಎಂ. ವ್ಯಾಸದ ಪಿ.ವಿ.ಸಿ. ಮೇಯಿನ್ ಪೈಪ್ ಲೈನ್ ಅಳವಡಿಸಿ ನೀರು ಸರಬರಾಜು ಮಾಡಲು. | ಅಂದಾಜು ಮೊತ್ತ <u>ರೂ. 1,37,000–00</u> |
| | ಒಟ್ಟು ಮೊತ್ತ | <u>ರೂ. 7,94,000–00</u> |

ಉಳಿಕೆ 44,000–00ರೂ.ಗಳನ್ನು ಹಂತ ಹಂತವಾಗಿ ಪಾವತಿಸುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

**ವಿಷಯ:8(40):–** ದಿನಾಂಕ:31–1–2009ರಂದು ನಡೆದ ಸಾಮಾನ್ಯ ಸಭೆಯಲ್ಲಿ 2009–10ನೇ ಸಾಲಿಗೆ ಸರ್ಕಾರದಿಂದ ಬಿಡುಗಡೆಯಾಗಲಿರುವ ಎಸ್.ಎಫ್.ಸಿ.ಮುಕ್ತ ನಿಧಿ ಅನುದಾನದಲ್ಲಿ ಪ್ರತೀ ವಾರ್ಡ್‌ಗೆ ತಲಾ ರೂ.10.00ಲಕ್ಷಗಳ ವೆಚ್ಚದ ಕಾಮಗಾರಿಗಳನ್ನು ನಿರ್ವಹಿಸಲು ಮಂಜೂರಾಗಿರುವುದರಿಂದ ಈ ಸಂಬಂಧ ಕಾಮಗಾರಿಗಳನ್ನು ನಿರ್ವಹಿಸಲು ಒಪ್ಪಿ ಅನುಮೋದನೆ ನೀಡುವ ವಿಚಾರ.

**ತೀರ್ಮಾನ:8(40):–** 2009–10ನೇ ಸಾಲಿಗೆ ಸರ್ಕಾರದಿಂದ ಬಿಡುಗಡೆಯಾಗಲಿರುವ ಎಸ್.ಎಫ್.ಸಿ.ಮುಕ್ತ ನಿಧಿ ಅನುದಾನದಲ್ಲಿ ಪ್ರತೀ ವಾರ್ಡ್‌ಗೆ ತಲಾ 10.00 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಟೆಂಡರ್ ಕರೆದು ಕ್ರಮ ವಹಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಹಾಗೂ ಎಸ್.ಎಫ್.ಸಿ.ಅನುದಾನದಲ್ಲಿ ಉಳಿಕೆಯಾದ 33.00ಲಕ್ಷ ರೂಪಾಯಿಗಳಲ್ಲಿ ರೂ.30.00ಲಕ್ಷಗಳನ್ನು ಬೀದಿ ದೀಪಗಳ ಅಳವಡಿಕೆ ಮತ್ತು ನಿರ್ವಹಣೆ ಬಾಬ್ತು ಬಾಕಿ ಬಿಲ್ಲುಗಳನ್ನು ಪಾವತಿಸುವುದೆಂದು ತೀರ್ಮಾನಿಸಲಾಯಿತು.

ನಂತರ ಹಾಲಿ ನಗರಸಭಾ ಅಧ್ಯಕ್ಷರ ಪ್ರಥಮ ಸಭೆಯಾಗಿರುವುದರಿಂದ ಅಭಿವೃದ್ಧಿ ಕಾಮಗಾರಿಗಾಗಿ ಅನುದಾನ ಬಿಡುಗಡೆಗೊಳಿಸಲು ಸದಸ್ಯರುಗಳು ಒತ್ತಾಯಪಡಿಸಿದ್ದರ ಮೇರೆಗೆ 35+2 ವಾರ್ಡ್‌ಗಳಿಗೂ ತಲಾ ರೂ.11.00ಲಕ್ಷ ರೂಪಾಯಿಗಳಂತೆ ಕಾಮಗಾರಿಗಳನ್ನು ನಗರಸಭೆ ನಿಧಿಯಿಂದ ಮಾಡಿಸಲು ಅಧ್ಯಕ್ಷರು ಸಭೆಯಲ್ಲಿ ಘೋಷಿಸಿದರು.

**ಕೈಗೊಳ್ಳಬೇಕಾದ ಕಾಮಗಾರಿಗಳ ವಿವರ:**

| ಕ್ರಮ ಸಂಖ್ಯೆ | ವಾರ್ಡ್ ಸಂಖ್ಯೆ | ಕಾಮಗಾರಿ ಹೆಸರು | ಅಂದಾಜು ಮೊಬಲಗು |
|---|---|---|---|
| 1 | 2 | 3 | 4 |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |
| | | | |

–17–

**ವಿಷಯ: 8(41):–** ಮಂಡ್ಯ ನಗರಸಭೆ ಕಾರ್ಯಾಲಯಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಮುಖ್ಯ ಕೇಬಲ್ ಸುಟ್ಟು ಹೋಗಿರುವುದರಿಂದ ತಾತ್ಕಾಲಿಕವಾಗಿ ವಿದ್ಯುತ್ ಸಂಪರ್ಕ ಪಡೆಯಲಾಗಿದ್ದು ಈಗ ಹೊಸದಾಗಿ ಭೂಗತ ಕೇಬಲ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಚೆಸ್ಕಂ, ಮಂಡ್ಯರವರು ತಿಳಿಸಿರುತ್ತಾರೆ. ಸದರಿ ಕಾಮಗಾರಿ ಅಂದಾಜು ಮೊತ್ತ ರೂ.2.00ಲಕ್ಷಗಳ ಕಾಮಗಾರಿಗೆ ಟೆಂಡರ್ ಕರೆದು ಕೆಲಸ ಮಾಡಿಸಲು ಒಪ್ಪಿ ಅನುಮೋದಿಸುವ ವಿಚಾರ.

**ತೀರ್ಮಾನ:8(41):–** ನಿಯಮಾನುಸಾರ ಟೆಂಡರ್ ಕರೆದು ಮಾಡಿಸಬಹುದೆಂದು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:8(42):–** ಈಗಾಗಲೇ ವಿದ್ಯುತ್ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಬೀದಿ ದೀಪಗಳು ಮತ್ತು ಹೈಮಾಸ್ಟ್ ದೀಪಗಳ ಟೆಂಡರ್‌ಗಳನ್ನು ಅನುಮೋದಿಸುವ ವಿಚಾರ.

**ತೀರ್ಮಾನ:8(42):–** ಬಂದಿರುವ ಟೆಂಡರ್‌ಗಳ ತುಲನಾತ್ಮಕ ಪಟ್ಟಿಯನ್ನು ಪರಿಶೀಲಿಸಿ ಅತ್ಯಂತ ಕಡಿಮೆ ದರದ ಟೆಂಡರ್‌ನ್ನು ಸಭೆಯು ಒಪ್ಪಿ ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯ:8(43):–** ಮಂಡ್ಯ ನಗರಸಭೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಕಛೇರಿ ಕೆಲಸಕಾರ್ಯಗಳಿಗೆ ಅನುಕೂಲವಾಗುವಂತೆ ಪ್ರತ್ಯೇಕ ಒಂದು ಬಾಡಿಗೆ ವಾಹನದ ವ್ಯವಸ್ಥೆ ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳತಕ್ಕ ವಿಚಾರ.

**ತೀರ್ಮಾನ:8(43):–** ನಿಯಮಾನುಸಾರ ಟೆಂಡರ್ ಕರೆದು ಒಂದು ಬಾಡಿಗೆ ಕಾರ್ ವ್ಯವಸ್ಥೆ ಮಾಡುವುದೆಂದು ಸಭೆಯು ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ:8(44):–** ನಗರಸಭೆಯ ಬೆರಳಚ್ಚು ಶಾಖೆಗೆ ಹೊಸದಾಗಿ ಕಂಪ್ಯೂಟರ್ ಮತ್ತು ಪ್ರಿಂಟರ್ ಖರೀದಿಸುವುದು ಮತ್ತು ಎ.ಸಿ. ವ್ಯವಸ್ಥೆ ಮಾಡಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(44):–** ಹಾಲಿ ಇರುವ ಎರಡು ಸಂಖ್ಯೆ ಕಂಪ್ಯೂಟರ್ ಮತ್ತು ಒಂದು ಡಾಟ್ ಮ್ಯಾಟ್ರಿಕ್ಸ್ ಪ್ರಿಂಟರ್ ತುಂಬಾ ಹಳೆಯದಾಗಿದ್ದು, ಒಂದು ಸಂಖ್ಯೆ ಕಂಪ್ಯೂಟರ್ ಮತ್ತು ಒಂದು ಸಂಖ್ಯೆ ಡಾಟ್‌ಮ್ಯಾಟ್ರಿಕ್ಸ್ ಪ್ರಿಂಟರ್ ಕೆಟ್ಟುಹೋಗಿರುವುದರಿಂದ ಆದ್ದರಿಂದ ಹೊಸದಾಗಿ ಒಂದು ಕಂಪ್ಯೂಟರ್ ಮತ್ತು ಒಂದು ಹೆಚ್.ಪಿ.ಲೇಸರ್ ಪ್ರಿಂಟರ್ ಖರೀದಿಸಿ ಅಳವಡಿಸುವುದು ಮತ್ತು ಸದರಿ ಕೊಠಡಿಗೆ ಎ.ಸಿ.ವ್ಯವಸ್ಥೆ ಮಾಡಿಸುವುದೆಂದು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

**ವಿಷಯ :8(45):–** ಸದಸ್ಯರಾದ ಶ್ರೀ.ಶಂಕರೇಗೌಡರವರಿಂದ ಬಂದಿರುವ ವಿಷಯ.

ವಾರ್ಡ್ ನಂಬರ್:35, ಷುಗರ್ ಟೌನ್‌ನಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮತ್ತು ರಸ್ತೆ ಅಭಿವೃದ್ಧಿಗಾಗಿ ಅಂದಾಜು ವೆಚ್ಚ ರೂ.6.00ಲಕ್ಷಗಳ ಕಾಮಗಾರಿ ನಿರ್ವಹಿಸುವ ಬಗ್ಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿದಿದ್ದು ಸದರಿ ಕಾಮಗಾರಿಯ ಬದಲಾಗಿ ತುರ್ತು ಅವಶ್ಯಕತೆ ಇರುವ ಕಾಮಗಾರಿ ಅಂದರೆ ಶ್ರೀ. ಹಾಲಿನ ಚಂದ್ರುರವರ ಮನೆಯಿಂದ ಶ್ರೀ.ದೇವಯ್ಯರವರ ಮನೆಯವರೆಗೆ ಕಾಂಕ್ರೀಟ್ ರಸ್ತೆ ಮಾಡಿಸುವ ಕಾಮಗಾರಿಯನ್ನು ಹಿಂದಿನ ಕಾಮಗಾರಿ ಟೆಂಡರ್‌ನ್ನು ರದ್ದುಪಡಿಸಿ ಹೊಸದಾಗಿ ಟೆಂಡರ್ ಕರೆದು ಮಾಡಿಸುವ ಬಗ್ಗೆ ಒಪ್ಪಿಗೆ ನೀಡತಕ್ಕ ವಿಚಾರ.

**ತೀರ್ಮಾನ:8(45):–** ಹೊಸದಾಗಿ ಟೆಂಡರ್ ಕರೆದು ಬದಲಿ ಕಾಮಗಾರಿಯನ್ನು ಮಾಡಿಸಬಹುದೆಂದು ಒಪ್ಪಿ ತೀರ್ಮಾನಿಸ ಲಾಯಿತು.

**ವಿಷಯ:8(46):–** ಮಾನ್ಯ ಸದಸ್ಯರಾದ ಶ್ರೀ.ಹೆಚ್.ಸಿ.ಬೋರೇಗೌಡರವರಿಂದ ಬಂದಿರುವ ವಿಷಯ.

ಮಂಡ್ಯ ನಗರಸಭೆಯಿಂದ ನಿರ್ವಹಿಸಿರುವ ಈ ಕೆಳಕಂಡ ಕಾಮಗಾರಿಗಳಿಗೆ ಬಿಲ್ಲನ್ನು ಪಾವತಿ ಮಾಡಬೇಕೆಂದು ಕೋರಿರುವ ಬಗ್ಗೆ ಒಪ್ಪಿಗೆ ನೀಡತಕ್ಕ ವಿಚಾರ.

(1) ವಾರ್ಡ್ ನಂಬರ್:17 ಗಾಂಧಿನಗರ 10ನೇ ಕ್ರಾಸ್‌ನಲ್ಲಿ ಸಿದ್ದಪ್ಪಾಜಿ ದೇವಸ್ಥಾನದ ಮುಂಭಾಗ ಚಪ್ಪಡಿ ಡ್ರೈನ್ ಮತ್ತು ಮಣ್ಣು ಭರ್ತಿ ಮಾಡಿಸಿದ ಬಾಬ್ತು ರೂ.98,000–00ಗಳನ್ನು ಪಾವತಿಸಲು ಕೋರಿರುವ ವಿಚಾರ..

(2) ವಾರ್ಡ್ ನಂಬರ್:17ರ ಬಿ.ವಿ.ಕೆ.ಲೇಔಟ್‌ನ ಬುದ್ಧ ಮಾರ್ಗದಲ್ಲಿ ಆರ್.ಸಿ.ಸಿ.ಡೆಕ್ ಸ್ಲ್ಯಾಬ್‌ನ ನಿರ್ಮಾಣ ಮೊತ್ತ ಅಂದಾಜು ರೂ.50,000–00 ಬಿಲ್ಲನ್ನು ಪಾವತಿಸಲು ಕೋರಿರುವ ವಿಚಾರ.

**ತೀರ್ಮಾನ:8(46):–** ಪಾವತಿಸುವುದೆಂದು ಸಭೆಯು ಒಪ್ಪಲಾಯಿತು.

–18–

**ವಿಷಯ: 8(47):–** ಶ್ರೀ.ಎನ್. ಶಂಕರೇಗೌಡ, ಪ್ರಥಮ ದರ್ಜೆ ಸಹಾಯಕರು, ನಗರಸಭೆ, ಮಂಡ್ಯ ರವರ ಬಾಬ್ತು ವೈದ್ಯಕೀಯ ವೆಚ್ಚದ ಬಿಲ್ಲು ಮೊಬಲಗು ರೂ.5,500–00ಗಳನ್ನು ಮರುಪಾವತಿಸಲು ಒಪ್ಪಿಗೆ ನೀಡತಕ್ಕ ವಿಚಾರ.
**ತೀರ್ಮಾನ:8(47):–** ನಿಯಮಾನುಸಾರ ಪರಿಶೀಲಿಸಿ ಮೇಲಧಿಕಾರಿಗಳಿಗೆ ಶಿಫಾರಸ್ಸು ಮಾಡುವುದೆಂದು ತೀರ್ಮಾನಿಸಲಾಯಿತು.

**ವಿಷಯ:8(48):–** ಮಾನ್ಯ ಸದಸ್ಯರಾದ ಶ್ರೀ.ಶಂಕರೇಗೌಡರವರಿಂದ ಬಂದಿರುವ ವಿಷಯ.
ವಾರ್ಡ್ ನಂಬರ್:35 ದೇವೇಗೌಡನದೊಡ್ಡಿ ರಸ್ತೆಗೆ ಹಾಗೂ "ಷುಗರ್ ಟೌನ್" ಹೊಸ ಬಡಾವಣೆ ಎಂದು ರಸ್ತೆಯ ಪಕ್ಕ ನಾಮಫಲಕ ಹಾಕುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
**ತೀರ್ಮಾನ:8(48):–** ನಾಮಫಲಕ ಹಾಕಿಸುವುದು ಮತ್ತು ಅಂದಾಜು ಮೊತ್ತ ರೂ.20,000–00ಗಳಿಗೆ ಮಾಡಿಸುವುದೆಂದು ಒಪ್ಪಲಾಯಿತು.

**ವಿಷಯ:8(49):–** ವಾರ್ಡ್ ನಂಬರ್:4ರ ಶಂಕರ ಮಠ ಶನಿ ಮಹಾತ್ಮ ದೇವಸ್ಥಾನ ರಸ್ತೆ ಆದಿಚುಂಚನಗಿರಿ ವಿದ್ಯಾರ್ಥಿ ನಿಲಯದ ರಸ್ತೆಗೆ ಗ್ರ್ಯಾವೆಲ್ ಹಾಕಿಸಿ ರಸ್ತೆಯನ್ನು ಮೇಲ್ಮಟ್ಟಕ್ಕೆ ಎತ್ತರಿಸಿದ ಬಾಬ್ತು ಕಾಮಗಾರಿ ಬಿಲ್ ಮೊತ್ತ ರೂ.50,000/–ಗಳನ್ನು ಪಾವತಿಸುವ ಬಗೆ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ:8(49):–** ಸದರಿ ಕಾಮಗಾರಿ ಕೆಲಸ ಮಾಡಿಸಿರುವುದರಿಂದ ಸದರಿ ಬಿಲ್ ಮೊತ್ತವನ್ನು ಪಾವತಿಸುವುದೆಂದು ತೀರ್ಮಾನಿಸಲಾಯಿತು.

**ಸಹಿ:**
**(ಜಿ.ಎಸ್.ನಾಗಮಣಿ),**
**ಅಧ್ಯಕ್ಷರು,**
**ನಗರಸಭೆ, ಮಂಡ್ಯ.**

"ನಕಲು"

ಪೌರಾಯುಕ್ತರು,
ನಗರಸಭೆ, ಮಂಡ್ಯ.